info@buntsanghablr.com
buntsanghabangalore@yahoo.in



# ಸ್ನೇಹ ಚಿರಂತನೆ



ಮಾಸ ಪತ್ರಿಕೆ

ಆಗಸ್ಟ್ 2025
ಸಂಪುಟ 21 ಸಂಚಿಕೆ 8

ಸಂಚಿಕೆ ಬೆಲೆ ರೂ. 1/–



ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II, ಮಿಸ್ತಾರ ಮಾನ್ಸೂನ್ ಫೆಸ್ಟ್–2025



ಮಹಿಳಾ ವಿಭಾಗ – ಮಾಸಿಕ ಕಾರ್ಯಾಗಾರ



ಪ್ರಾರ್ಥನಾ ಮಂದಿರ ಸಮಿತಿ – ಭಜನಾ ತರಗತಿ ಉದ್ಘಾಟನಾ ಸಮಾರಂಭ





ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ I ಮತ್ತು II – ಪದಗ್ರಹಣ ಸಮಾರಂಭ

## ಜಗತ್ತಿನ ನಾಲ್ಕನೇ ಅತೀ ದೊಡ್ಡ ಆರ್ಥಿಕ ಶಕ್ತಿಯಾಗಿ ಭಾರತ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
# 324, Bunts' Sangha Complex, Chord Road, Vijayanagar, Bengaluru - 40.
Phone : 080-23399323 | 23399636 | Email : info@buntsanghablr.com


Prashasthi
Modular Interiors
Brings interiors to Life
CERTIFIED
ISO
9001:2015
COMPANY
Total Interior & Solution for Residential and Commercial
Service Undertaken as
Turnkey Interior Decorators
& Civil Construction
Contact us :
Ramesh Shetty
9611648717
prashasthi.modularinteriors@gmail.com
#3/4 Andrahalli - Thigalarapalya Main Road,
Vishwaneedam Post,Near Peenya 2nd Stage,
Bangalore - 560 091.

ADVT.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

VOL - 21 AUGUST - 2025 ISSUE - 8

**ಸಾಹಿತ್ಯ ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ನೇರ ನಡೆ-ನುಡಿಯ ಏರ್ಯದ ಆಳ್ವರು | 6 |
| Bunt's Sangha R.N.S Vidyaniketan A Report on Talent's Day | 7 |
| ಅಮ್ಮನ ಕುರಿತು ಒಂದಿಷ್ಟು......... | 8 |
| Bunts' Sangha R.N.S. Vidyaniketan A Report on Investiture Ceremony | 10 |
| ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-II ಶಾಲೆಯ 2025-26ನೇ ಸಾಲಿನ ನೂತನ ವಿದ್ಯಾರ್ಥಿ ಮಂತ್ರಿಮಂಡಲದ ಪದಗ್ರಹಣ ಸಮಾರಂಭದ ವರದಿ | 11 |
| ಗೀತಾ ಜ್ಞಾನ ಯಜ್ಞ (ಜ್ಞಾನ) ಭಕ್ತಿಯ ಮಹಿಮೆ - ವರದಿ | 12 |
| ಪ್ರಾರ್ಥನಾ ಮಂದಿರ ಸಮಿತಿ - ಭಜನಾ ತರಗತಿ ಉದ್ಘಾಟನಾ ಕಾರ್ಯಕ್ರಮ | 14 |
| ಬಂಟರ ಸಂಘ ಬೆಂಗಳೂರು-ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024-26 | 15 |
| ಕ್ರೀಡಾ ವಿಭಾಗ - ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ - 2025-26 | 17 |
| ಬಂಟರ ಸಂಘ ಬೆಂಗಳೂರು- ಮಹಿಳಾ ವಿಭಾಗ ಮಾಸಿಕ ಕಾರ್ಯಾಗಾರ | 24 |
| ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ - II ಮಿಸ್ತಾರ ಮಾನ್ಸೂನ್ ಫೆಸ್ಟ್-2025 | 25 |
| ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ 2024-26 | 26 |

**ಮುಖ ಪುಟ**

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ-II
ಮಿಸ್ತಾರ ಮಾನ್ಸೂನ್ ಫೆಸ್ಟ್-2025
ಮಹಿಳಾ ವಿಭಾಗ - ಮಾಸಿಕ ಕಾರ್ಯಾಗಾರ
ಪ್ರಾರ್ಥನಾ ಮಂದಿರ ಸಮಿತಿ - ಭಜನಾ ತರಗತಿ ಉದ್ಘಾಟನಾ ಸಮಾರಂಭ
ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ I ಮತ್ತು II -
ಪದಗ್ರಹಣ ಸಮಾರಂಭ

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. - ಸಂಪಾದಕ ಮಂಡಳಿ

# ಸಂಪಾದಕೀಯ



## ಜಗತ್ತಿನ ನಾಲ್ಕನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಭಾರತ

ನಾವೆಲ್ಲರೂ 79ನೇ ಸ್ವಾತಂತ್ರ್ಯೋತ್ಸವದ ಸಂಭ್ರಮಕ್ಕೆ ಅಣಿಯಾಗುತ್ತಿದ್ದೇವೆ. ಕಳೆದ 78 ವರ್ಷಗಳ ಸ್ವತಂತ್ರ ಭಾರತದ ಚರಿತ್ರೆಯಲ್ಲಿ ನಮ್ಮ ದೇಶ ಹಲವು ಬಗೆಯ ರಾಜಕೀಯ, ಸಾಮಾಜಿಕ, ಆರ್ಥಿಕ ಏರಿಳಿತಗಳಿಗೆ ಸಾಕ್ಷಿಯಾಗಿದೆ. ಜಾಗತೀಕರಣೋತ್ತರ ಕಾಲಘಟ್ಟದಲ್ಲಿ ಸಂಭವಿಸಿದ ಅನೇಕ ವಿದ್ಯಮಾನಗಳು ಇಡೀ ಜಗತ್ತೇ ಭಾರತವನ್ನು ಬೆರೆಗುಗಣ್ಣಿನಿಂದ ನೋಡುವಂತೆ ಮಾಡಿದೆ. ಮುಖ್ಯವಾಗಿ ಕಳೆದ ಒಂದು ದಶಕದಲ್ಲಿ ಉದ್ಯಮ, ರಕ್ಷಣೆ, ತಾಂತ್ರಿಕತೆ ಮೊದಲಾದ ರಂಗಗಳಲ್ಲಿ ಉಂಟಾಗಿರುವ ಪ್ರಗತಿ ಭಾರತವು ಜಗತ್ತಿನ ನಾಲ್ಕನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲು ಕಾರಣವಾಗಿದೆ.

ಭಾರತವು ಜಪಾನ್ ದೇಶವನ್ನು ಹಿಂದಿಕ್ಕಿ, ಜಗತ್ತಿನ ನಾಲ್ಕನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ ಎಂಬುದಾಗಿ ನೀತಿ ಆಯೋಗದ ಸಿಇಒ ಬಿ.ವಿ.ಆರ್ ಸುಬ್ರಹ್ಮಣ್ಯಂ ಅವರು ಹೇಳಿದ್ದಾರೆ. ನೀತಿ ಆಯೋಗದ 10ನೇ ಆಡಳಿತ ಮಂಡಳಿಯ ಸಭೆಯ ನಂತರ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಐಎಂಎಫ್ ವರದಿಯನ್ನು ಉಲ್ಲೇಖಿಸಿರುವ ಸುಬ್ರಹ್ಮಣ್ಯಂ, “ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಭಾರತ ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆಯಲಿದೆ” ಎಂದು ತಿಳಿಸಿದ್ದಾರೆ. ಸ್ವಾತಂತ್ರ್ಯದ ಸಡಗರದಲ್ಲಿರುವ ನಮ್ಮೆಲ್ಲರಿಗೂ ಇದು ನಿಜಕ್ಕೂ ಹೆಮ್ಮೆ ಪಡುವ ಸಂಗತಿಯಾಗಿದೆ.

ಪ್ರಸ್ತುತ ಭಾರತದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ ಎಂದಿರುವ ಸುಬ್ರಹ್ಮಣ್ಯಂ ಅವರು “ನಾವು ಈಗ 14 ಟ್ರಿಲಿಯನ್ ಅಮೆರಿಕನ್ ಡಾಲರ್ ಆರ್ಥಿಕತೆಯನ್ನು ಹೊಂದಿದ್ದೇವೆ. ಅಲ್ಲದೇ ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ದತ್ತಾಂಶದ ಪ್ರಕಾರ, “ಜಪಾನ್ ದೇಶದ ಆರ್ಥಿಕತೆಗಿಂತ ಭಾರತದ ಆರ್ಥಿಕತೆ ದೊಡ್ಡದಾಗಿದೆ” ಎಂದು ತಿಳಿಸಿದ್ದಾರೆ. ಐಎಂಎಫ್ ಅಂಕಿ ಅಂಶಗಳನ್ನು ಗಮನಿಸಿದರೆ, ಸದ್ಯ ಅಮೆರಿಕ, ಚೀನಾ ಮತ್ತು ಜರ್ಮನಿ ದೇಶಗಳು ಮಾತ್ರ ಭಾರತಕ್ಕಿಂತ ದೊಡ್ಡ ಆರ್ಥಿಕತೆಯನ್ನು ಹೊಂದಿವೆ. ನಮ್ಮ ಯೋಜನೆಗಳೆಲ್ಲವೂ ಕೈಗೂಡಿದರೆ ಮುಂದಿನ 2.5–3 ವರ್ಷಗಳಲ್ಲಿ ನಾವು ಮೂರನೇ ಅತಿದೊಡ್ಡ ಆರ್ಥಿಕತೆಯಾಗುತ್ತೇವೆ” ಎಂಬ ಭರವಸೆ ನೀಡಿದ್ದಾರೆ.

ಭಾರತವು ಪ್ರಸ್ತುತ ವೇಗವಾಗಿ ಬೆಳೆಯುವ ಹಂತದಲ್ಲಿದೆ. ಮುಂದಿನ 20ರಿಂದ 25 ವರ್ಷಗಳ ಕಾಲ ಭಾರತವು ವಾಸ್ತವವಾಗಿ ಹೊಂದಿರುವ ಜನಸಂಖ್ಯಾ ಲಾಭಾಂಶವನ್ನು ಗಮನದಲ್ಲಿಟ್ಟುಕೊಂಡು ಮತ್ತಷ್ಟು ವೇಗವಾಗಿ ಬೆಳೆಯುವ ಸಾಮರ್ಥ್ಯವನ್ನು ಪಡೆದುಕೊಂಡಿದೆ. ಈ ನಿಟ್ಟಿನಲ್ಲಿ ಎಲ್ಲಾ ರಾಜ್ಯಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆರ್ಥಿಕ ಗುರಿಯನ್ನು ನಿಗದಿಪಡಿಸಿಕೊಂಡು ಕಾರ್ಯನಿರ್ವಹಿಸುವುದು ಅತ್ಯಂತ ಮುಖ್ಯ ಎಂಬುದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಿಲುವಾಗಿದೆ. “ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಉತ್ಪಾದನಾ ವೆಚ್ಚ ಕಡಿಮೆ ಇರಬೇಕು ಎಂಬುದು ನಮ್ಮ ನಿಲುವು. ಭಾರತ ಆರ್ಥಿಕ ಪೈಪೋಟಿಯನ್ನು ಸ್ಪರ್ಧಾ ಮನೋಭಾವನೆಯಿಂದ ನೋಡುತ್ತದೆಯೇ ವಿನಃ ಶತ್ರು ಭಾವನೆಯಿಂದಲ್ಲ” ಎಂಬುದನ್ನು ಪ್ರಧಾನಮಂತ್ರಿಯವರು ವಿವಿಧ ಸಂದರ್ಭಗಳಲ್ಲಿ ಖಚಿತಪಡಿಸಿದ್ದಾರೆ.

ವಿದ್ಯುನ್ಮಾನ ವಲಯದಲ್ಲಿ ಆಗಿರುವ ಕ್ಷಿಪ್ರ ಬೆಳವಣಿಗೆಗಳು ಜಗತ್ತಿನ ಅನೇಕ ದೇಶಗಳಿಗೆ ಮಾದರಿಯಾಗಿವೆ. ಯುಪಿಐ ನಂತಹ ಭಾರತೀಯ ಡಿಜಿಟಲ್ ಪಾವತಿ ವಿಧಾನಕ್ರಮವನ್ನು ಬೇರೆ ಬೇರೆ ದೇಶಗಳು ಅನುಸರಿಸುತ್ತಿವೆ. ವರ್ತಮಾನದ ದಿನಗಳಲ್ಲಿ ವಿವಿಧ ದೇಶಗಳ ನಡುವೆ ಯುದ್ಧ ಸಂಭವಿಸಿದ ಸಂದರ್ಭಗಳಲ್ಲಿ ಅಥವಾ ಜಾಗತಿಕ ವಲಯದಲ್ಲಿ ದೊಡ್ಡ ಘಟನೆಗಳು ಸಂಭವಿಸಿದ ಸಂದರ್ಭಗಳಲ್ಲಿ ಭಾರತದ ನಿಲುವೇನು ಎಂಬುದನ್ನು ಅನೇಕ ದೇಶಗಳು ಕಾದು ನೋಡುವಂತಾಗಿದೆ. ಇದು ನಿಜಕ್ಕೂ ಸ್ವತಂತ್ರ ಭಾರತದ ಗರಿಮೆ.

ಸ್ನೇಹ ಚಿಂತನೆ ಬಳಗದ ಎಲ್ಲಾ ಓದುಗರಿಗೂ 79ನೇ ಸ್ವಾತಂತ್ರ್ಯ ದಿನದ ಹಾರ್ದಿಕ ಶುಭಾಶಯಗಳು.

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ಅಧ್ಯಕ್ಷರ ಮಾತು



**"ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಂಸಿ ಜನತಾಂ ।
ದೇವಾ ಭಾಗಂ ಯಥಾ ಪೂರ್ವೇ ಸಂಜ್ಞಾನ ಉಪಾಸತೇ ॥"**

ನಾವೆಲ್ಲರೂ ಸಾಮರಸ್ಯದಿಂದ ನಡೆಯೋಣ, ಒಕ್ಕೊರಲಿನಿಂದ ಮಾತನಾಡೋಣ, ನಮ್ಮೆಲ್ಲರ ಉದ್ದೇಶ ಒಂದೇ ಆಗಿರಲಿ. ಒಂದೇ ಮನಸ್ಸಿನಿಂದ ನಡೆದುಕೊಳ್ಳೋಣ. ನಮ್ಮ ಪೂರ್ವಜರಂತೆ ದೇವತಾ ಭಾಗವನ್ನು ಒಂದಾಗಿ ಆರಾಧಿಸೋಣ.

ನಮ್ಮ ದೇಶವು ವಿವಿಧತೆಯಲ್ಲಿ ಏಕತೆಗೆ ಪರಂಪರೆಯಿಂದಲೂ ಹೆಸರಾಗಿದ್ದು, ಜಾತಿ, ಮತ, ಧರ್ಮ, ಭಾಷೆ ಬೇರೆ-ಬೇರೆಯಾದರೂ ನಾವೆಲ್ಲರೂ ಭಾರತೀಯರು, ನಾವೆಲ್ಲರೂ ಬಂಟರು. ವಿಭಜನೆಗೆ ಯತ್ನಿಸುವ ಶಕ್ತಿಗಳು ಹೆಚ್ಚುತ್ತಿರುವ ಈ ಕಾಲದಲ್ಲಿ, ಅದಕ್ಕೆ ಒತ್ತು ಕೊಡದೇ ಬಂಟ ಸಮಾಜವು ತಮ್ಮ ಒಗ್ಗಟ್ಟಿನಿಂದ ಉಳಿಯಬೇಕು, ಬೆಳೆಯಬೇಕು. ಒಗ್ಗಟ್ಟೇ ನಮ್ಮ ಶಕ್ತಿ. ನಾವು ಏಕರೂಪವಾಗಿದ್ದರೆ ಮಾತ್ರ ನಮ್ಮ ಸಮಾಜವು ಅಭಿವೃದ್ಧಿಯ ದಿಕ್ಕಿನಲ್ಲಿ ಹೆಜ್ಜೆ ಇಡಲು ಸಾಧ್ಯವಾಗುತ್ತದೆ.

ಶಿಕ್ಷಣ ಸೇವೆ, ಸಾಂಸ್ಕೃತಿಕ ಬೆಳವಣಿಗೆ ಇವುಗಳೆಲ್ಲ ನಮ್ಮ ಸಂಘದ ಬಲಿಷ್ಠ ಉದ್ದೇಶಗಳು. ಒಗ್ಗಟ್ಟಿನಿಂದ ಮಹತ್ವದ ಸಾಧನೆ ಮಾಡಬಹುದು ಎಂಬುವುದಕ್ಕೆ ನಮ್ಮ ಸಂಘದ ಇತಿಹಾಸವೇ ಸಾಕ್ಷಿ.

ನಮ್ಮ ಶಾಲೆಯು ಪಠ್ಯ ಪುಸ್ತಕದ ಜ್ಞಾನಕ್ಕೆ ಮಾತ್ರ ಸೀಮಿತವಾಗಿರದೇ, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೂ ಬದ್ಧವಾಗಿದೆ. ಸೃಜನಾತ್ಮಕ ಚಟುವಟಿಕೆಗಳೊಂದಿಗೆ, ಶಾಲಾ ವಿದ್ಯಾರ್ಥಿಗಳಲ್ಲಿ ಸ್ವಯಂ ವಿಶ್ವಾಸ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುತ್ತಿದೆ. ವಿಶೇಷವಾಗಿ ಇತ್ತೀಚೆಗೆ ನಮ್ಮ ಶಾಲೆಯ ವಿದ್ಯಾರ್ಥಿಗಳು ಕ್ರೀಡಾ ಕ್ಷೇತ್ರದಲ್ಲಿ ಝೋನಲ್ ವಲಯದಲ್ಲಿ ಜಿಲ್ಲೆ ಮತ್ತು ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಅನೇಕ ಬಹುಮಾನಗಳನ್ನು ಪಡೆದಿರುವುದು ಹೆಮ್ಮೆಯ ವಿಷಯ. ಈ ಸಾಧನೆಗೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರಿಗೆ ಹೃತ್ಪೂರ್ವಕ ಅಭಿನಂದನೆಗಳು.

ನಮ್ಮ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಒಂದಾದ ಬಂಟರ ಸಂಘ ಆರ್.ಎನ್.ಎಸ್.-II ನೂತನ ವಿದ್ಯಾರ್ಥಿನಿಯರ ವಸತಿ ನಿಲಯದ ನಿರ್ಮಾಣ ಕಾರ್ಯವು ಎಲ್ಲಾ ಸದಸ್ಯರ ಸಹಕಾರ ಹಾಗೂ ಸಮಿತಿಯ ತ್ಯಾಗ ಮನೋಭಾವದೊಂದಿಗೆ ಅಂತಿಮ ಹಂತದಲ್ಲಿರುವುದು ಮಹತ್ವದ ಸಂಗತಿ. ಇದು ಕೇವಲ ವಿದ್ಯಾರ್ಥಿಗಳ ವಸತಿ ಕಟ್ಟಡವಾಗಿರದೇ, ಅನೇಕ ವಿದ್ಯಾರ್ಥಿಗಳ ಭವಿಷ್ಯದ ಬುನಾದಿಗೆ ನಾಂದಿಯಾಗಲಿದೆ. ಇದು ಪ್ರತಿಭಾವಂತ ಬಂಟ ವಿದ್ಯಾರ್ಥಿಗಳಿಗೆ ಆರಾಮದಾಯಕ ಹಾಗೂ ಸುರಕ್ಷಿತ ವಸತಿಯನ್ನು ಕಲ್ಪಿಸಲು ಬಂಟರ ಸಂಘ ಇಟ್ಟ ಒಂದು ದಿಟ್ಟ ಹೆಜ್ಜೆ. ನಮ್ಮ ಸಂಘದ ಬಲ, ನಮ್ಮ ಸದಸ್ಯರ ಏಕತೆಯಲ್ಲಿ ಅಡಗಿದೆ. ನಿಮ್ಮ ತ್ಯಾಗ, ಪ್ರೋತ್ಸಾಹ ಸದಾ ಹೀಗೇ ಮುಂದುವರಿಯಲಿ ಎಂದು ಹಾರೈಸುತ್ತೇನೆ.

ಪ್ರತಿಯೊಬ್ಬ ಸದಸ್ಯರ ಜೀವನದಲ್ಲಿ ಆರೋಗ್ಯ, ಸಮೃದ್ಧಿ ಮತ್ತು ಗೌರವ ಸದಾ ನೆಲೆಸಿರಲಿ.

**ಸದಸ್ಯ ಬಾಂಧವರೆಲ್ಲರಿಗೂ ಸ್ವಾತಂತ್ರ್ಯ ದಿನಾಚರಣೆ ಹಾಗೂ ಗೌರಿ-ಗಣೇಶ ಹಬ್ಬದ ಶುಭಾಶಯಗಳು.**

ಇಂತಿ ತಮ್ಮ ಪ್ರೀತಿಯ
**ಸಿಏ. ಅಶೋಕ್ ಶೆಟ್ಟಿ ಎಂ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಯವರ ವರದಿ



**ಸರ್ವರಿಗೂ 79ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು.**

"ಶ್ರೀ ಕೃಷ್ಣ ಹುಟ್ಟುತ್ತಲೇ ದೇವರಾಗಿ ಹುಟ್ಟಿರುತ್ತಾನೆ. ಶ್ರೀ ಕೃಷ್ಣ ತನ್ನ ಬದುಕಿನುದ್ದಕ್ಕೂ ಪವಾಡಗಳನ್ನೇ ಮಾಡಿ ಜನರನ್ನು ಮೆಚ್ಚಿಸಿಕೊಂಡಿದ್ದ, ಆದರೂ ಅಪವಾದಗಳು ಆರೋಪಗಳು ಶ್ರೀ ಕೃಷ್ಣನನ್ನು ಬಿಟ್ಟಿಲ್ಲ". ಅಂದಾದ ಮೇಲೆ ಮಾನವರಾಗಿ ಹುಟ್ಟಿ, ಅಪವಾದಗಳು, ಆರೋಪಗಳು ಬರಬಾರದು ಎಂದರೆ ತಪ್ಪಾದೀತು. ಎಲ್ಲಾ ಆರೋಪಗಳಿಗೂ, ಎಲ್ಲಾ ಅಪವಾದಗಳಿಗೂ ಒಂದು ತಾರ್ಕಿಕ ಅಂತ್ಯ ಬೇಕಾಗಿದೆ.

**ಮಾನ್ಯ ಸದಸ್ಯರೇ,**

ದಿನಾಂಕ 06.07.2025ರಿಂದ 13.07.2025ರವರೆಗೆ ಪ್ರತೀ ದಿನ ಸಂಜೆ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಸ್ವಾಮಿ ಬ್ರಹ್ಮಾನಂದರವರು ನಡೆಸಿಕೊಟ್ಟ ಗೀತಾ ಜ್ಞಾನ ಯಜ್ಞ ಕಾರ್ಯಕ್ರಮವು ಆಧ್ಯಾತ್ಮಿಕ ಬಂಧುಗಳ ಮೆಚ್ಚುಗೆಗೆ ಪಾತ್ರವಾಯಿತು.

ದಿನಾಂಕ 19.07.2025ರಂದು ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–IIರಲ್ಲಿ ಪ್ರಾರ್ಥನಾ ಮಂದಿರ ಸಮಿತಿಯ ವತಿಯಿಂದ ಉಚಿತ ಭಜನಾ ತರಬೇತಿ ತರಗತಿಯನ್ನು ಉದ್ಘಾಟಿಸಲಾಯಿತು. ಸಮಿತಿಯ ವತಿಯಿಂದ ಪ್ರತೀ ಸಂಕಷ್ಟಹರ ಚತುರ್ಥಿಯಂದು ಸೇವಾಕರ್ತರಿಂದ ರಂಗಪೂಜೆ, ವಿವಿಧ ಭಜನಾ ತಂಡಗಳಿಂದ ಭಜನಾ ಕಾರ್ಯಕ್ರಮವನ್ನು ಆಯೋಜಿಸುತ್ತಾ ಬಂದಿರುವ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಶೇಖ, ಸಂಚಾಲಕರಾದ ಶ್ರೀ ಪ್ರಸಾದ್ ಕುಮಾರ್ ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

ದಿನಾಂಕ 19.07.2025ರಂದು ಮಹಿಳಾ ವಿಭಾಗದ ವತಿಯಿಂದ ಮಹಿಳೆಯರಿಗಾಗಿ ಸಾರಿ ಬಾಕ್ಸ್ ಫೋಲ್ಡಿಂಗ್ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರವನ್ನು ಇಂಡಿಯಾ ಡಿಸೈನ್ ಇನ್ಸ್‌ಟಿಟ್ಯೂಟ್‌ನ ಸ್ಥಾಪಕಿ ಡಾ. ಸಂಗೀತಾ ಅಮರನಾಥ್‌ರವರು ನಡೆಸಿಕೊಟ್ಟರು. ಕಾರ್ಯಕ್ರಮವನ್ನು ಆಯೋಜಿಸಿದ ಶ್ರೀಮತಿ ಯೋಗ್ಯ ಎಲ್. ರೈ, ಸಂಚಾಲಕಿ ಶ್ರೀಮತಿ ಮಲ್ಲಿಕಾ ಕೆ. ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

19.07.2025ರಂದು ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–IIರಲ್ಲಿ ಹಾಗೂ ದಿನಾಂಕ 01.08.2025ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–Iರಲ್ಲಿ ಶಾಲಾ ವಿದ್ಯಾರ್ಥಿಗಳ ಪದಗ್ರಹಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

30.07.2025ರಿಂದ 02.08.2025ರವರೆಗೆ ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–IIರಲ್ಲಿ ಮಿಸ್ತ್ರಾರ–ಮಾನ್ಸೂನ್ ಫೆಸ್ಟ್ 2025ನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕನ್ನಡ ಚಲನಚಿತ್ರ ನಟರಾದ ಶ್ರೀ ವಜ್ರಧೀರ ಜೈನ್‌ರವರು ಆಗಮಿಸಿದ್ದರು.

ಪ್ರಾರ್ಥನಾ ಮಂದಿರ ಸಮಿತಿಯ ವತಿಯಿಂದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರಲ್ಲಿ ವರ್ಷಂಪ್ರತಿಯಂತೆ ಈ ವರ್ಷವೂ ಗಣೇಶ ಚೌತಿಯನ್ನು ದಿನಾಂಕ 27.08.2025ರಂದು ಆಚರಿಸುತ್ತಿದ್ದೇವೆ. ಹಾಗೂ ಅದೇ ದಿನ ಮಧ್ಯಾಹ್ನ 2.00ಗಂಟೆಗೆ ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ವತಿಯಿಂದ ಸಂಘದ ಹವ್ಯಾಸಿ ಹಾಗೂ ಅತಿಥಿ ಕಲಾವಿದರಿಂದ ವೀರಮಣಿ ಕಾಳಗ ಯಕ್ಷಗಾನವು ನಡೆಯಲಿದ್ದು, ಸದಸ್ಯರೆಲ್ಲರೂ ಭಾಗವಹಿಸಬೇಕಾಗಿ ವಿನಂತಿ.

ಕರ್ನಾಟಕ–ಗೋವಾ ರೀಜನಲ್ ಮಟ್ಟದ ಈಜು, ಯೋಗ, ಜಿಮ್ನಾಸ್ಟಿಕ್ಸ್, ಬಿಲ್ಲುಗಾರಿಕೆ ಸ್ಪರ್ಧೆಗಳಲ್ಲಿ ಪ್ರಶಸ್ತಿಯನ್ನು ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ನಮ್ಮ ಶಾಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು. ತರಬೇತಿ ನೀಡಿದ ಶಿಕ್ಷಕರಿಗೆ, ಪ್ರೋತ್ಸಾಹಿಸಿದ ಪೋಷಕರಿಗೆ ವಂದನೆಗಳು.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಸಮಿತಿ



# ಗಣೇಶ ಚತುರ್ಥಿ ಆಚರಣೆ

**ದಿನಾಂಕ : 27-08-2025 ಬುಧವಾರ**

ಆಸ್ತಿಕ ಬಂಧುಗಳೇ,

ಸಂಘದ ಸಂಕೀರ್ಣದಲ್ಲಿರುವ "ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ"ದಲ್ಲಿ 'ಗಣೇಶ ಚತುರ್ಥಿ'ಯು ದಿನಾಂಕ 27.08.2025 ಬುಧವಾರದಂದು ಭಕ್ತಿಪೂರ್ವಕವಾಗಿ, ವಿಶೇಷ ಪೂಜಾಲಂಕಾರದೊಂದಿಗೆ ನಡೆಯಲಿದೆ.

## ಕಾರ್ಯಕ್ರಮಗಳ ವಿವರ

| | | |
|---|---|---|
| ಪೂರ್ವಾಹ್ನ 8:00 ಗಂಟೆಗೆ | : | ವಿಶೇಷ ಪಂಚಾಮೃತ ಅಭಿಷೇಕ |
| ಪೂರ್ವಾಹ್ನ 09:30 ಗಂಟೆಗೆ | : | **ಭಜನಾ ಕಾರ್ಯಕ್ರಮ - ಸಂಘದ ಶ್ರೀ ವರಸಿದ್ಧಿ ವಿನಾಯಕ ಭಜನಾ ತಂಡದಿಂದ ಮತ್ತು ಯಲಚಗುಪ್ಪ ಶಾಲೆಯ ಭಜನಾ ತರಗತಿಯ ಮಕ್ಕಳಿಂದ ಮತ್ತು ಭಜನಾ ತರಬೇತುದಾರರಿಂದ** |
| ಪೂರ್ವಾಹ್ನ 10.00 ಗಂಟೆಗೆ | : | ಗಣಪತಿ ಹೋಮ |
| ಪೂರ್ವಾಹ್ನ 10.30 ಗಂಟೆಗೆ | : | ಗಣಪತಿ ಪ್ರಾಣ ಪ್ರತಿಷ್ಠೆ, ಕಲ್ಪೋಕ್ತ ಪೂಜೆ |
| ಮಧ್ಯಾಹ್ನ 12.00 ಗಂಟೆಗೆ | : | ಮಹಾಮಂಗಳಾರತಿ ಮತ್ತು ಪ್ರಸಾದ ವಿತರಣೆ |
| ಮಧ್ಯಾಹ್ನ 1.00 ಗಂಟೆಗೆ | : | ಅನ್ನ ಸಂತರ್ಪಣೆ |
| ಮಧ್ಯಾಹ್ನ 2.00 ಗಂಟೆಗೆ | : | **ಸಂಘದ ಯಕ್ಷಗಾನ ಸಮಿತಿಯ ವತಿಯಿಂದ ಸಂಘದ ಹವ್ಯಾಸಿ ಹಾಗೂ ಅತಿಥಿ ಕಲಾವಿದರಿಂದ ಪೌರಾಣಿಕ ಯಕ್ಷಗಾನ - ವೀರಮಣಿ ಕಾಳಗ** |
| ಸಂಜೆ : 7.00 ಗಂಟೆಗೆ | : | ಮಹಾಮಂಗಳಾರತಿ, ಪ್ರಸಾದ ವಿತರಣೆ ಮತ್ತು ಗಣೇಶ ವಿಸರ್ಜನೆ |

ಈ ಎಲ್ಲಾ ಪೂಜಾಕಾರ್ಯಗಳಲ್ಲಿ ಭಕ್ತಾಧಿಗಳು ತನು, ಮನ, ಧನ, ಸಹಾಯದಿಂದ ಸಕುಟುಂಬ ಸಮೇತರಾಗಿ ಭಾಗವಹಿಸಿ ಶ್ರೀ ವರಸಿದ್ಧಿ ವಿನಾಯಕನ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತಾ ತಮಗೆ ಆದರದ ಸ್ವಾಗತವನ್ನು ಕೋರುವ,

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಪ್ರಸಾದ್ ಕುಮಾರ್ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**CA ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಶೋಭಾ ಶೇಖ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರು**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
**ಶೋಭಾ ಶೇಖ, ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ ಮೊ: 9901885998**

ವಿ.ಸೂ: 'ಅಭಿಷೇಕ' ಮಾಡಿಸುವ ಭಕ್ತಾದಿಗಳು ರೂ. 151/-ನ್ನು ಮತ್ತು 'ಗಣಹೋಮ' ಮಾಡಿಸುವವರು ರೂ. 251/-ನ್ನು ಸಂಘದ ಕಛೇರಿ ಅಥವಾ ದೇವಸ್ಥಾನದಲ್ಲಿ ಪಾವತಿಸಿ ರಸೀದಿ ಪಡೆಯಬೇಕಾಗಿ ವಿನಂತಿ.

# ನೇರ ನಡೆ-ನುಡಿಯ ಏರ್ಯದ ಆಳ್ವರು



ಶ್ರೀಮತಿ ಹೇಮಾವತಿ ವೀರೇಂದ್ರ ಹೆಗ್ಗಡೆ

ನೇರ ನಡೆ, ನೇರ ನುಡಿಯ ಏರ್ಯ ಲಕ್ಷ್ಮಿನಾರಾಯಣ ಆಳ್ವರ ಚಿತ್ರ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಮೊನ್ನೆ ತಾನೇ ಕ್ಷೇತ್ರಕ್ಕೆ ಬಂದು ಬಹಳಷ್ಟು ಹೊತ್ತು ಮಾತನಾಡಿ ಹೋಗಿದ್ದರು ಅನಿಸುತ್ತಿದೆ. ಉದ್ದವಾದ ನೀಳ ಶರೀರ, ಮುಖದಲ್ಲಿ ಸಾತ್ವಿಕ ಭಾವ, ತಲೆ ಎತ್ತಿ ನಡೆವ ಠೀವಿ, ಸದಾ ನಸುಕೆನೆ ಬಣ್ಣದ ಪೈರನ್, ಬಿಳಿ ಪಂಚೆ ಉಟ್ಟು ಬರುತ್ತಿದ್ದ ಆಳ್ವರ ಕೈಯಲ್ಲೊಂದು ದಪ್ಪನೆಯ ಪುಸ್ತಕ. ನನ್ನ ಕಣ್ಣು ತಕ್ಷಣ ಅವರ ಕೈಲಿರೋ ಪುಸ್ತಕದತ್ತ ಹೋಗುತ್ತಿತ್ತು. ಅದು ಕವನ-ಸಂಕಲನವೋ, ಕಾದಂಬರಿಯೋ, ಆತ್ಮಚರಿತ್ರೆಯೋ ಆಗಿರುತ್ತಿತ್ತು. 'ಪುಸ್ತಕ ಹೇಗಿದೆ?' ಅಂತ ಕೇಳಿದರೆ ಸಾಕು, 'ನೀವು ಇಟ್ಟುಕೊಳ್ಳಿ, ತುಂಬಾ ಚೆನ್ನಾಗಿದೆ ಅಂತ ಹೇಳುತ್ತಿದ್ದರು. ಅವರಲ್ಲಿರುತ್ತಿದ್ದ ಪುಸ್ತಕಗಳು ನಮ್ಮ ಅಷ್ಟು ದೊಡ್ಡ ಗ್ರಂಥಾಲಯದಲ್ಲಂತೂ ಇರುತ್ತಿರಲಿಲ್ಲ. ಯಾಕೆಂದರೆ ಅದು ಹೊಚ್ಚ ಹೊಸದಾಗಿ ಬಿಡುಗಡೆಯಾದ ಪುಸ್ತಕವಾಗಿರುತ್ತಿತ್ತು. 94ರ ವಯಸ್ಸಿನಲ್ಲೂ ಅವರ ಚಿಂತನೆಗಳನ್ನು ನವ ನವೀನವಾಗಿರಿಸುತ್ತಿದ್ದುದು ಈ ಪುಸ್ತಕಗಳೇ.

ಕ್ಷೇತ್ರಕ್ಕೆ ಬಂದಂತೆ ನೇತ್ರಾವತಿ ವಸತಿ ಗೃಹದಲ್ಲಿ ಒಂದೆರಡು ದಿನ ಇದ್ದು ಬೆಳಗ್ಗೆ ದೇವರ ದರ್ಶನ ಮಾಡಿ ಚಾವಡಿಯಲ್ಲಿ ಬಂದು ಕುಳಿತುಕೊಳ್ಳುತ್ತಿದ್ದರು. ಹೆಗ್ಗಡೆಯವರು ಅವರಷ್ಟಕ್ಕೆ ಜನರನ್ನು ಭೇಟಿ ಮಾಡುತ್ತಿದ್ದರೆ, ಅನೇಕರು ಆಳ್ವರ ಗುರುತು ಹಿಡಿದು ಹತ್ತಿರ ಬಂದು ಮಾತನಾಡುತ್ತಿದ್ದರು. ಸದಾ ಕ್ಷೇತ್ರದ ಹೊಸ-ಹೊಸ ಯೋಜನೆಗಳಿಗೆ ಕಿವಿಯಾಗುತ್ತಿದ್ದ ಅವರು ಅದರಿಂದ ತುಂಬಾ ಸಂತೋಷಪಡುತ್ತಿದ್ದ ಸಹೃದಯಿ. ಎಲ್ಲಾದರೂ ನಡೆಯಬಾರದ ಘಟನೆಗಳು, ಹಿಂಸೆ ಇತ್ಯಾದಿ ನಡೆದರೆ ಆ ಬಗ್ಗೆ ಬೇಸತ್ತುಕೊಳ್ಳುತ್ತಾ ಹನಿಗಣ್ಣಾಗುತ್ತಿದ್ದ ಹೆಂಗರುಳು ಆಳ್ವರದ್ದು. ಬಹುಶಃ ಕಳೆದ ಕೆಲವು ದಿನಗಳಿಂದ ಬಂಟ್ವಾಳ ಆಸುಪಾಸಿನಲ್ಲಿ ಮತ್ತಿತರ ಕಡೆಗಳಲ್ಲಿ ಆದ ಭೀಕರ ನೆರೆ ಹಾವಳಿಗೆ ಅವರು ಎಷ್ಟು ತಲ್ಲಣಿಸುತ್ತಿದ್ದರೋ ಬಲ್ಲವರಾರು?.

ಕ್ಷೇತ್ರದಲ್ಲಿ ನಡೆಯೋ ಜಾತ್ರೆ, ಲಕ್ಷದೀಪೋತ್ಸವ ಸಂದರ್ಭಗಳಲ್ಲಿ ಮನೆ ಮಂದಿಗಿಂತಲೂ ಮೊದಲೇ ಬಂದು 'ಸುರೇಂದ್ರರು ಬರಲಿಲ್ವಾ, ಶ್ರದ್ಧಾ ಬರಲಿಲ್ವಾ' ಅಂತ ಮನೆಯವರನ್ನೆಲ್ಲಾ ವಿಚಾರಿಸುತ್ತಿದ್ದರು. ರಾತ್ರಿಯವರೆಗೆ ಕುಳಿತು ಜಾತ್ರೆ, ರಥೋತ್ಸವ ನೋಡಿ ಮನೆ ಮಂದಿ ಜೊತೆ ಸೇರಿ ಸಂಭ್ರಮಿಸುತ್ತಿದ್ದರು. ದೀಪೋತ್ಸವಕ್ಕೆ ಬಂದರೆ ಧರ್ಮ ಮತ್ತು ಸಾಹಿತ್ಯದ ಬಗೆಗಿನ ಭಾಷಣಗಳನ್ನು ಕೇಳಿ ಮರುದಿನವಿಡೀ ಅವರ ಸಮಕ್ಷಮದಲ್ಲಿ ಅದರ ವಿಮರ್ಶೆ ನಡೆಯುತ್ತಿತ್ತು. ಸಂಗೀತ ನೃತ್ಯಾದಿಗಳನ್ನು ಕುಳಿತು ಕೇಳಿ, ನೋಡಿ ಆನಂದಿಸುತ್ತಿದ್ದ ಕಲಾಪ್ರೇಮಿ.



ಜುಲೈ 27
ಏರ್ಯ
ಲಕ್ಷ್ಮಿನಾರಾಯಣ
ಆಳ್ವರ
ಪುಣ್ಯ ದಿನ

ತುಂಬು ಕುಟುಂಬದಲ್ಲಿ ಅಕ್ಕ, ತಂಗಿಯರಿಗೆ ಒಬ್ಬನೇ ತಮ್ಮನಾಗಿ ಬೆಳೆದ ಆಳ್ವರಲ್ಲಿ ಮನೆಮಂದಿಗೆಲ್ಲಾ ಪ್ರೀತಿ. ವರ್ಷಕ್ಕೊಮ್ಮೆ ಬಂಧುಗಳನ್ನೆಲ್ಲಾ ಸೇರಿಸಿಕೊಂಡು ತಮ್ಮ ಹಿರಿಯರ ಬಗ್ಗೆ ಅವರ ಬದುಕು ಬವಣೆಗಳ ಬಗ್ಗೆ ಮಕ್ಕಳಿಗೆ ತಿಳಿಸುತ್ತಾ ನಾನಾ ರೀತಿಯ ಆಟ, ಊಟ, ವಿನೋದಗಳೊಂದಿಗೆ ಸಂಭ್ರಮಿಸುತ್ತಿದ್ದರು. ಒಂದು ಕಾಲದಲ್ಲಿ ಸಹಕಾರಿ ಧುರೀಣರಾಗಿ ಹಿಂದುಳಿದ ವರ್ಗದವರ ಬಗ್ಗೆ ಹೆಚ್ಚಿನ ಕೆಲಸ ಮಾಡಿದವರು ಆಳ್ವರು. 'ನಾನು ಹೆಚ್ಚು ಶಾಲೆ ಕಲಿತವನಲ್ಲವಾದರೂ ಸಾಹಿತ್ಯದ ಓದು ನನ್ನನ್ನು ಬೆಳೆಸಿತು' ಎನ್ನುವ ಏರ್ಯದವರು ಹಲವು ಪುಸ್ತಕಗಳನ್ನೂ ಬರೆದಿದ್ದಾರೆ.

ಆಳ್ವ ಅವರ ಹೆಸರಂತೆ ಪತ್ನಿ ಸದಾ ಆನಂದಿ. ಅವರನ್ನು ಅಪರೂಪಕ್ಕೊಮ್ಮೆ ಕ್ಷೇತ್ರಕ್ಕೆ ಕರೆದುಕೊಂಡು ಬರುತ್ತಿದ್ದರು. ಯಾವುದೇ ಅಪೇಕ್ಷೆ ಇಲ್ಲದ ಅತ್ಯಂತ ಸರಳ ಸ್ವಭಾವದ ಆನಂದಿ ಅವರಿಗೂ ನಮ್ಮನ್ನು ಕಂಡರೆ ಬಹಳ ಪ್ರೀತಿ. ಒಬ್ಬಳೇ ಮಗಳು, ಬೆಂಗಳೂರಿನಲ್ಲಿರುವುದರಿಂದ ಮನೆ 'ಸಾಕೇತ'ದಲ್ಲಿ ಗಂಡ ಹೆಂಡಿರಿಬ್ಬರೇ. ಇವರ ಮನೆಯಲ್ಲಿ ದೊಡ್ಡ ವಿಶಾಲವಾದ ಹಜಾರ (ಹಾಲ್)ವನ್ನು ವಿಭಾಗಿಸುವುದು ಗೋಡೆಗಳಲ್ಲ, ಪುಸ್ತಕದ ಕವಾಟುಗಳೇ. ಎಲ್ಲಾ ಪುಸ್ತಕಗಳನ್ನು ಅಚ್ಚುಕಟ್ಟಾಗಿ ಜೋಡಿಸಿಟ್ಟಿದ್ದನ್ನು ನೋಡುವುದೇ ಖುಷಿ. ಕ್ಷೇತ್ರದಿಂದ ಏನೇ ಒಳ್ಳೆಯ ಕೆಲಸ, ಕಾರ್ಯಕ್ರಮ ನಡೆಯಲಿ ಆಳ್ವರಿಗೆ ಮೆಚ್ಚುಗೆಯಾದರೆ ತಕ್ಷಣ

ಅವರಿಂದ ಒಂದು ಸುಂದರವಾದ ಕೈಬರಹದ ಕಾಗದ ಬರುತ್ತಿತ್ತು. ಅವರ ಅಕ್ಷರದ ಅಂದ ಮತ್ತು ಒಕ್ಕಣೆಯ ಚಂದದಿಂದಾಗಿ ಆ ಕಾಗದಗಳನ್ನು ಎಸೆಯುವುದಕ್ಕೆ ಮನಸ್ಸಾಗುತ್ತಿರಲಿಲ್ಲ. 94 ವರ್ಷದ ಇಳಿ ವಯಸ್ಸಿನಲ್ಲೂ ಅಷ್ಟು ಸುಂದರವಾದ ಬರವಣಿಗೆ, ಹಾಗೆಯೇ ನೆನಪು ಶಕ್ತಿ ಅವರದಾಗಿತ್ತು. ಒಳ್ಳೆಯ ಭಾಷಣಕಾರರೂ ಆದ ಆಳ್ವರು ಎಲ್ಲಿಯೂ, ಎಲ್ಲರಿಗೂ ಸಲ್ಲುವವರಾಗಿದ್ದರು. ಇಂದಿಗೂ ಕ್ಷೇತ್ರದಲ್ಲಿ ಅವರು ಬಂದು ಕುಳಿತುಕೊಳ್ಳುತ್ತಿದ್ದ ಜಾಗವನ್ನು ನೋಡಿದಾಗ ಒಂದು ರೀತಿಯ ಶೂನ್ಯತೆ ಆವರಿಸಿಕೊಂಡಂತೆ ಆಗುತ್ತಿದೆ. ಆಳ್ವರು ಎಂದೂ ಶಾರೀರಿಕವಾಗಿಯೂ, ವೈಯಕ್ತಿಕವಾಗಿಯೂ ಬಾಗಿದವರಲ್ಲ. 'ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಂ' ಎಂಬಂತೆ ಬದುಕಿದ ಏರ್ಯ ಲಕ್ಷ್ಮೀನಾರಾಯಣ ಆಳ್ವರ ಬದುಕು, ಅವರ ಪ್ರೀತಿ, ಸದಾ ನಮ್ಮ ನೆನಪಿನಲ್ಲಿ ಉಳಿಯುವಂತಹದು.

ನನ್ನ ಮಗಳ ಮದುವೆ ಸಂದರ್ಭದಲ್ಲಿ ಹಾಡಿದ ಹಾಡುಗಳ ಭಾವನೆಗೆ ಕರಗಿ ಕಣ್ಣೀರಾಗಿದ್ದ ಆಳ್ವರು, ಅವರ ಮೊಮ್ಮಗಳ ಮದುವೆಗೂ ಈ ಹಾಡುಗಳನ್ನು ಕೇಳಿ, ಹಾಡಿಸಿ ಖುಷಿ ಪಟ್ಟಿದ್ದರು. ಮೊನ್ನೆ ಅವರ ಮಗಳು, ಅಳಿಯ ಕ್ಷೇತ್ರಕ್ಕೆ ಬಂದವರು ಆಳ್ವರ ಬಗ್ಗೆ ಮಾತನಾಡುತ್ತಾ, 'ಮನೆಯಲ್ಲಿ ಯಾವುದೇ ವಿಚಾರದ ಪ್ರಸ್ತಾಪವೆತ್ತಲಿ, ಅದು ಕೊನೆಗೊಳ್ಳುವುದು ಕ್ಷೇತ್ರದ, ಖಾವಂದರ ವಿಷಯದೊಂದಿಗೆ' ಅನ್ನುತ್ತಿದ್ದರು. ಇಂತಹಾ ಅಭಿಮಾನ, ಸ್ನೇಹ ಆಳ್ವರದ್ದು.

## Bunt's Sangha R.N.S Vidyaniketan
## A Report on Talent's Day




Every child is gifted with a unique talent. It is extremely adventurous to discover and nurture it. Saviskar of ICSE and Jigyasa of CBSE, a talent fest to showcase the students' creativity was celebrated in the month of June and July at the RTB auditorium. The students from grade I to X had participated in this mega event to expose their hidden talent to the outer world. The inaugural ceremony began with the formal invocation and lighting of the lamp. Smt. Usha Santosh, the Principal of our institution inspired the budding talents which truly awakened the young minds. A set of well designed competitions served as gateways for bringing out their potentialities to the forefront. These prodigies displayed their eloquence, dramatic skills, artistic ability and proved to be worthy chefs by preparing mouth watering dishes without using fire. A magnificent talent fest was a spectacular show with evergreen memories cherished for the longest time.

# ಅಮ್ಮನ ಕುರಿತು ಒಂದಿಷ್ಟು.........



ದೇವಕಿ ದೇವಿ ಹೆಗ್ಡೆ

ಕುಂಬಳೆ ಸೀಮೆಯ ಪೆರಡಾಲ ಗ್ರಾಮದ ಕಲ್ಲಕಳೆಯ ಮನೆತನದ ಶ್ರೀಮತಿ ಕಾವೇರಿ ಮತ್ತು ಕಯ್ಯಾರ ಮನೆತನದ ಶ್ರೀ ಶಂಕರಾಳ್ವ ದಂಪತಿಗಳ ಪುತ್ರಿಯಾಗಿ 1927ನೇ ಇಸವಿಯ ಡಿಸೆಂಬರ್ 10ರಂದು ನಮ್ಮಮ್ಮ ಉಞ್ಞಕ್ಕೆಯವರು ಜನಿಸಿದರು. ಅಂದಿನ ಮಾತೃಮೂಲ ಅವಿಭಕ್ತ ಕುಟುಂಬದ ಏಕಮಾತ್ರ ಪುತ್ರಿ. ಸಹಜವಾಗಿಯೇ ಹಿರಿಯರಿಂದ ದೈವಭಕ್ತಿ ಮತ್ತು ಕರ್ತವ್ಯ ಪ್ರಜ್ಞೆಗಳನ್ನು ಮೈಗೂಡಿಸಿಕೊಂಡು ಬೆಳೆದರು. ಆಟ ಪಾಠಗಳೆರಡರಲ್ಲೂ ಮುಂಚೂಣಿಯಲ್ಲಿದ್ದ ಉಞ್ಞಕ್ಕೆಯವರು 7ನೇ ತರಗತಿಯವರೆಗೆ ಶಾಲೆಯಲ್ಲಿ ಕಲಿತಿದ್ದರು.

ಸಣ್ಣ ವಯಸ್ಸಿನಲ್ಲೇ ಅವರು ತಮ್ಮ ತಂದೆಯನ್ನು ಕಳೆದುಕೊಂಡಿದ್ದರೂ ಬಹಳ ಧೈರ್ಯಶಾಲಿಯಾಗಿದ್ದರು. ಸಣ್ಣವರಿದ್ದಾಗ ದನವೊಂದು ಅವರನ್ನು ಹಾಯಲು ಬಂದುದು., ಅವರು ಭಯಪಡದೆ ಅದರ ಕೊಂಬುಗಳೆರಡನ್ನೂ ಗಟ್ಟಿಯಾಗಿ ಹಿಡಿದುಕೊಂಡದ್ದು, ದನ ಅವರನ್ನು ತನ್ನ ಕೊಂಬಿನಲ್ಲಿ ಎತ್ತಿಕೊಂಡು ಸ್ವಲ್ಪ ದೂರದವರೆಗೆ ಓಡಿಹೋದದ್ದು ಮತ್ತು ಯಾವುದೇ ಅಪಾಯವಿಲ್ಲದೇ ಅವರು ಪಾರಾದ ರೋಚಕ ಘಟನೆಯನ್ನು ನಮ್ಮ ಅಜ್ಜಿ ನಮಗೆ ಹೇಳುತ್ತಿದ್ದರು.



1943 ರಲ್ಲಿ ಉಞ್ಞಕ್ಕೆಯವರಿಗೆ 16 ವರ್ಷವಾದಾಗ ತಮಗಿಂತ 12ವರ್ಷ ಹಿರಿಯರಾದ ಅವರ ಸೋದರತ್ತೆ ಮತ್ತು ಸೋದರ ಮಾವನ ಮಗನಾದ ಕಿಞ್ಞಣ್ಣರೊಂದಿಗೆ ಗುರುವಾಯೂರು ದೇವರ ಸನ್ನಿಧಿಯಲ್ಲಿ ವಿವಾಹವಾಯಿತು. ಎಳೆಯ ವಯಸ್ಸಿನಲ್ಲೇ ಹಸ್ತಪ್ರತಿ, ಲೇಖನಗಳೊಂದಿಗೆ ಸಾಹಿತ್ಯ ಕೃಷಿ ಆರಂಭಿಸಿದ ಕಯ್ಯಾರರು ಮುಂದೆ ಪತ್ರಿಕೋದ್ಯಮಿಯಾಗಿ, ಲೇಖಕರಾಗಿ, ಕವಿಯಾಗಿ, ವಾಗ್ಮಿಯಾಗಿ ಒಳ್ಳೆಯ ಹೆಸರು ಗಳಿಸಿದ್ದರು. ಸ್ವಾಭಾವಿಕವಾಗಿಯೇ ಅವರಿಗೆ ಸಾಕಷ್ಟು ನೆಂಟಸ್ತಿಕೆಯ ಪ್ರಸ್ತಾಪಗಳು ಬಂದಿದ್ದವು. ಹಾಗಿದ್ದರೂ 'ನಾನು ನಿನ್ನ ಅಮ್ಮನನ್ನೇ ಮದುವೆಯಾದದ್ದು' ಎಂದು ಕಯ್ಯಾರರು ಆ ಕಾಲದ ಮಧುರ ಕ್ಷಣಗಳನ್ನು ನಮ್ಮೊಡನೆ ಹಂಚಿಕೊಳ್ಳುತ್ತಿದ್ದರು.

ಇವರಿಬ್ಬರ ಹೆಸರಿನ ಆದಿ ಭಾಗದಲ್ಲಿರುವ ಕಿಞ್ಞ ಮತ್ತು ಉಞ್ಞ ಎಂಬ ಪದಗಳಿಗೆ ಚಿಕ್ಕ ಪುಟ್ಟ ಎಂಬ ಸಮಾನ ಅರ್ಥವಿದೆ. (ಮಾಹಿತಿ ಡಾ। ಪಾದೇಕಲ್ಲು ವಿಷ್ಣು ಭಟ್ಟ) ಕನ್ನಡದ ಕಾಗುಣಿತದಲ್ಲಿ ಬಹಳ ಅಪರೂಪವಾಗಿ ಉಪಯೋಗಿಸಲ್ಪಡುವ ಞ್ಞ ಎಂಬ ಅಕ್ಷರವು ಇವರಿಬ್ಬರ ಹೆಸರಿನ ಮಧ್ಯದಲ್ಲಿಯೂ ಬಂದಿರುವುದು ಒಂದು ಅತ್ಯಪೂರ್ವ ವಿಚಾರ. ಎರಡೂ ಹೆಸರುಗಳ ಅಂತ್ಯ ಭಾಗದಲ್ಲಿ ಅಣ್ಣ ಮತ್ತು ಅಕ್ಕ ಎಂಬ ಶಬ್ದಗಳಿರುವುದು ಕಾಕತಾಳೀಯವಾಗಿದ್ದರೂ, ಬಾಲ್ಯದಲ್ಲಿಯೇ ಇವರಿಗೆ ಇಂತಹ ಗೌರವಯುತ ಹೆಸರನ್ನಿತ್ತ ಇವರ ಹಿರಿಯರು, ಅವರ ಮುಂದಿನ ಉತ್ತಮ ಜೀವನಕ್ಕೆ ನಾಂದಿ ಹಾಡಿದರು. ಹೀಗೆ ಅವರಿಬ್ಬರ ಹೆಸರಿನ ಅಕ್ಷರ ಅಕ್ಷರಗಳಲ್ಲಿಯೂ ಇರುವ ತಾದಾತ್ಮ್ಯತೆಗಳು ಮುಂದೆ ಸುಮಾರು 63 ವರ್ಷಗಳ ಅವರ ದಾಂಪತ್ಯ ಜೀವನದಲ್ಲಿಯೂ ಮುಂದುವರಿದುದು ನಾವೆಲ್ಲರೂ ಕಂಡುಕೊಂಡಿರುವ ಸತ್ಯ.

ಅಮ್ಮ ಅಪ್ಪನಿಗೆ ನಾವು ಇಬ್ಬರು ಹೆಣ್ಣು ಮಕ್ಕಳು ಮತ್ತು ಆರು ಮಂದಿ ಗಂಡು ಮಕ್ಕಳು. ತುಂಬಿದ ಸಂಸಾರ, ಶಿಕ್ಷಕ ವೃತ್ತಿ, ಸಮಾಜ ಸೇವೆ, ಏಕೀಕರಣದ ಹೋರಾಟ, ಸಂಘಟನೆಗಳು ಹೀಗೆ ವಿವಿಧ ರಂಗಗಳಲ್ಲಿ ಬಿಡುವಿಲ್ಲದೇ ದುಡಿಯುತ್ತಿದ್ದ ನಮ್ಮ ತಂದೆ ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈಯವರು ಹೆಚ್ಚಿನ ಸಮಯವನ್ನು ಮನೆಯಿಂದ ಹೊರಗೆ ಕಳೆಯಬೇಕಾಗುತ್ತಿತ್ತು. ಕಯ್ಯಾರರ ಎಲ್ಲಾ ಜವಾಬ್ದಾರಿಗಳನ್ನೂ ಅಮ್ಮ ಬಹಳ ಯಶಸ್ವಿಯಾಗಿ ನಿರ್ವಹಿಸಿಕೊಂಡು ಬರುತ್ತಿದ್ದರು. ಅಮ್ಮನಿಗಾಗಲೀ, ಅಪ್ಪನಿಗಾಗಲೀ ದಣಿವೆಂಬುದಿಲ್ಲ. ಬಿಡುವಿಲ್ಲದ ದುಡಿಮೆ. ಬೆಳಗ್ಗೆ 4 ಘಂಟೆಯೊಳಗೆ ಏಳುವುದು ಅಮ್ಮನಿಗೆ ರೂಢಿಯಾಗಿತ್ತು. ಮನೆಮಂದಿಗೆ ನಿದ್ರಾ ಭಂಗ ಆಗಬಾರದೆಂಬ ಕಾಳಜಿಯೊಂದಿಗೆ ಸದ್ದಿಲ್ಲದೆ ಒಲೆ ಹಚ್ಚಿ, ಕಾಫಿ, ತಿಂಡಿ, ಅಡುಗೆ ಎಲ್ಲಾ ಸಿದ್ಧಪಡಿಸಿ 9 ಘಂಟೆಗೆ ಆಳು ಕಾಳುಗಳೊಂದಿಗೆ ತೋಟ ಗದ್ದೆಗಳಿಗೆ ತೆರಳುವರು. ಅವರ ಮೇಲ್ವಿಚಾರಣೆಯೊಂದಿಗೆ, ತಾನೂ ದುಡಿಯುತ್ತಾ ಅವರ

ಸುಖ–ಕಷ್ಟಗಳಲ್ಲಿ ಭಾಗಿಯಾಗಿ ಅವರನ್ನು ಪ್ರೀತಿಯಿಂದ ಕಾಣುತ್ತಿದ್ದರು. ನಿಷ್ಕಲ್ಮಶ ಮನದ ಅವರು ಎಲ್ಲರಿಗೂ ಬೇಕಾದವರಾಗಿದ್ದರು. ಸಂಜೆಯ ಹೊತ್ತಿಗೆ ಅಮ್ಮ–ಅಪ್ಪ ಇಬ್ಬರೂ ತಮ್ಮ ಆಯಾಯ ದಿನದ ಆಗುಹೋಗುಗಳ ಬಗ್ಗೆ ಮಾತನಾಡಿ ಮರುದಿನ ಕೆಲಸದ ರೂಪುರೇಷೆ ಹಾಕಿಕೊಳ್ಳುವುದು ಅವರ ಅಭ್ಯಾಸವಾಗಿತ್ತು. ರಾತ್ರಿ ಮಕ್ಕಳನ್ನು ಸೇರಿಸಿಕೊಂಡು ಭಜನೆ ಹಾಡುತ್ತಿದ್ದರು. ಎಲ್ಲರಿಗೂ ಊಟ ಬಡಿಸಿ ನಂತರವೇ ಅಮ್ಮ ಊಟ ಮಾಡುತ್ತಿದ್ದರು.

ಪೌರಾಣಿಕ, ಚಾರಿತ್ರಿಕ, ಸಾಮಾಜಿಕ ಎಲ್ಲಾ ವಿಧದ ಪುಸ್ತಕಗಳನ್ನು ಓದುವುದರಲ್ಲಿ ಆಸಕ್ತಿ ಹೊಂದಿದ್ದರು. ಶಾಸ್ತ್ರೀಯ ಸಂಗೀತವನ್ನು ಅಭ್ಯಸಿಸಿ, ಚೆನ್ನಾಗಿ ಹಾಡುತ್ತಿದ್ದರು. ಹಾರ್ಮೋನೀಯಂ ಮತ್ತು ಪಿಟೀಲು ನುಡಿಸುತ್ತಿದ್ದರು. ನನ್ನ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕಯ್ಯಾರರು ರಚಿಸಿದ 'ವಿರಾಗಿಣಿ' ನಾಟಕವನ್ನು ನಾವು ಅಭಿನಯಿಸಿದ್ದೇವೆ. ಅದರಲ್ಲಿರುವ ಎಲ್ಲಾ ಹಾಡುಗಳಿಗೆ ಉಜ್ಞಕ್ಕೆಯವರು ರಾಗ ಸಂಯೋಜನೆ ಮಾಡಿದ್ದರು.

ಅಮ್ಮ ಸಾಹಿತ್ಯದ ಅಭಿಮಾನಿ, ಪುಸ್ತಕಪ್ರೇಮಿ. ಅವರಿಗಾಗಿಯೇ ತಂದೆಯವರು ಎಲ್ಲಾ ದಿನ, ವಾರ, ಪಾಕ್ಷಿಕ, ಮಾಸ ಪತ್ರಿಕೆಗಳನ್ನು ತರಿಸುತ್ತಿದ್ದರು. ಅಪ್ಪನ ಲೇಖನಿಯ ಎಲ್ಲಾ ಪುಸ್ತಕಗಳೂ, ಅಮ್ಮ ಓದಿ "ಚೆನ್ನಾಗಿದೆ" ಎಂದ ಮೇಲೆಯೇ ಪ್ರಕಟಣೆಗೆ ಹೋಗುತ್ತಿದ್ದುವು. ತಾವು ಓದಿದ ಪುಸ್ತಕಗಳ ಬಗ್ಗೆ ಅಮ್ಮ–ಅಪ್ಪ ಇಬ್ಬರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದರು.

ನಾವು ಚಿಕ್ಕವರಿದ್ದಾಗ, ಅಮ್ಮ ನಮಗೆ ದಿನಕ್ಕೊಂದು ಹೊಸ ಹೊಸ ಕಥೆಗಳನ್ನು ಬಣ್ಣಿಸಿ ಹೇಳುತ್ತಿದ್ದರು. ಕಥೆ ಕೇಳುತ್ತಾ ನಿದ್ದೆ ಮಾಡುವುದು ಬಹಳ ಅಪ್ಯಾಯಮಾನ ಅನುಭವವಾಗಿತ್ತು. ಮುಂದೆ ಅವರ ಮೊಮ್ಮಕ್ಕಳು ಕೂಡಾ ಕಥೆ ಹೇಳಲು ಅವರಿಗೆ ದುಂಬಾಲು ಬೀಳುತ್ತಿದ್ದರು.

ಸಾಹಿತ್ಯ ಸಮ್ಮೇಳನಗಳಲ್ಲಿ, ಪ್ರಶಸ್ತಿ ಪುರಸ್ಕಾರ ಸಮಾರಂಭಗಳಲ್ಲಿ, ರೇಡಿಯೋ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ದೂರದ ಊರುಗಳಿಗೆ ಹೋಗುವ ಸಂದರ್ಭಗಳಲ್ಲಿ ತಂದೆಯವರು ಅಮ್ಮನನ್ನೂ, ಮಕ್ಕಳನ್ನೂ ಜೊತೆಯಲ್ಲಿ ಕರಕೊಂಡು ಹೋಗುತ್ತಿದ್ದರು. 1970ರ ಶಿಕ್ಷಕರ ರಾಷ್ಟ್ರ ಪ್ರಶಸ್ತಿ ಸ್ವೀಕರಿಸಲು ದೆಹಲಿಗೆ ಹೋದಾಗ ಅಮ್ಮ ಜೊತೆಯಲ್ಲಿದ್ದರು. 1977ರಲ್ಲಿ ದೆಹಲಿಯಲ್ಲಿ ಜರಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭ ಅಮ್ಮ, ನಾವು ಕುಟುಂಬಿಕರು, ತಂದೆಯವರ ಮಿತ್ರರೂ ಸೇರಿ 18 ಮಂದಿ ದಿಲ್ಲಿ, ಆಗ್ರಾ, ಅಲಹಾಬಾದ್ ಮತ್ತು ವಾರಣಾಸಿಗಳಿಗೆ ಪ್ರಯಾಣಿಸಿದ್ದೆವು. ಸಮ್ಮೇಳನ ಕಾರ್ಯಕ್ರಮಗಳನ್ನು ಆಲಿಸಿ ಅಮ್ಮ ಆನಂದಪಡುತ್ತಿದ್ದರು.

ಅಮ್ಮ ಅನ್ನಪೂರ್ಣೆ, ತಂದೆಯ ಸ್ನೇಹಿತರು, ಬಂಧು ಬಳಗದವರು ಮುನ್ಸೂಚನೆ ಇಲ್ಲದೇ ನಮ್ಮ ಹಳ್ಳಿಯ ಮನೆಗೆ ಬಂದಾಗ ಆಧುನಿಕ ಯಾಂತ್ರಿಕ ಸಲಕರಣೆಗಳಿಲ್ಲದ ಆ ಕಾಲದಲ್ಲಿ ಅಮ್ಮ ಹೊಸ ಹೊಸ ತಿಂಡಿ ಅಡುಗೆಯನ್ನು ಸಿದ್ಧಪಡಿಸಿ ಅತಿಥಿಗಳನ್ನು ಸತ್ಕರಿಸುವುದರಲ್ಲಿ ಸಂತೋಷಪಡುತ್ತಿದ್ದರು.

ಕಾಸರಗೋಡಿನಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿದ ಸಂದರ್ಭಗಳಲ್ಲಿ ದೂರದ ಮೈಸೂರು, ಬೆಂಗಳೂರು, ಗುಲ್ಬರ್ಗ, ಬೆಳಗಾಂ, ಧಾರವಾಡ ಮುಂತಾದೆಡೆಗಳಿಂದ ಆಗಮಿಸಿ ಗಣ್ಯರು ನಮ್ಮ ಮನೆಯಲ್ಲಿ ಉಳಕೊಂಡು ಅಮ್ಮನ ಅತಿಥಿ ಸತ್ಕಾರದ ಬಗ್ಗೆ ತುಂಬು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಬಂಧು ಬಳಗದವರು, ನೆರೆಕರೆಯವರು, ಆಳು ಕಾಳುಗಳು ಎಲ್ಲರೂ ಅಪ್ಪನಂತೆ ಅಮ್ಮನನ್ನೂ ಬಹಳ ಗೌರವದಿಂದ ಕಾಣುತ್ತಿದ್ದರು. ಅಮ್ಮ ಎಲ್ಲರೊಂದಿಗೆ ಆತ್ಮೀಯತೆಯಿಂದಿದ್ದರು. ತಮ್ಮ ಸಮಸ್ಯೆಗಳನ್ನೂ, ಕಷ್ಟಗಳನ್ನೂ ತೋಡಿಕೊಂಡು ಅಮ್ಮನ ಬಳಿ ಬಂದಾಗ ಅವರಿಗೆ ತನ್ನಿಂದಾದ ಸಹಾಯವನ್ನೂ ಪರಿಹಾರವನ್ನೂ ನೀಡಿ ಸಮಾಧಾನಪಡಿಸುವುದು ಅಮ್ಮನ ಔದಾರ್ಯವಾಗಿತ್ತು.

ತಮಗಾಗಿ ಏನನ್ನೂ ಬಯಸದ, ಸುಖ–ಕಷ್ಟಗಳೆರಡನ್ನೂ ಸಮಚಿತ್ತದಿಂದ ಸ್ವೀಕರಿಸುವ ಸ್ಥಿತ ಪ್ರಜ್ಞತೆಯ, ಸದಾ ಧನಾತ್ಮಕ ಚಿಂತನೆಯ ಅನ್ಯೋನ್ಯ ದಾಂಪತ್ಯ ಇವರದು.

ಸಂತೃಪ್ತ ಮುಗ್ಧ ನಗುಮೊಗದ ಅಮ್ಮನನ್ನು ಸ್ಮರಿಸಿಕೊಳ್ಳದ ದಿನವಿಲ್ಲ. ಆದರ್ಶ ಗೃಹಿಣಿಯಾಗಿ, ಮಮತಾಮಯಿ ಮಾತೆಯಾಗಿ, ದಣಿಯವರಿಯದ ಶ್ರಮಜೀವಿಯಾಗಿ, ಶ್ರೀಗಂಧದಂತೆ ತೇದು ತನ್ನ ಜೀವನವನ್ನು ಸಾರ್ಥಕ್ಯಗೊಳಿಸಿದ ಸೌಭಾಗ್ಯವತಿ ಅವರು. ಅಮ್ಮನನ್ನು ಸ್ಮರಿಸಿಕೊಂಡಾಗಲೆಲ್ಲಾ ವರ್ಣಿಸಲಾರದ ಒಂದು ಆನಂದಾನುಭೂತಿಯ ಅನುಭವವಾಗುತ್ತದೆ. ತಾಯಿ ಎಂದರೆ ದೇವರಿಗೆ ಸಮಾನ ಎಂಬ ಮಾತು ವೇದ ಪುರಾಣಗಳಲ್ಲೇ ಇದೆ. ನಮ್ಮಮ್ಮ ನನಗೆ ದಾರಿತೋರಿದ ಗುರುವೂ, ಆತ್ಮೀಯ ಗೆಳತಿಯೂ ಆಗಿದ್ದರು. ಯಾವ ಪುಣ್ಯದ ಫಲವೋ ಇಂತಹ ಅಮ್ಮ ಅಪ್ಪನನ್ನು ಪಡೆದ ನಾವು ಧನ್ಯರು.

ಅಂದು 2006ನೇ ಅಕ್ಟೋಬರ್ 23ರಂದು ಅಮ್ಮನ ಆತ್ಮಜ್ಯೋತಿ ಪರಮಾತ್ಮನ ಪಾದಸೇರಿತ್ತು. ಮನಸ್ಸು ಭಾರವಾಗುತ್ತಿದೆ. ಕಣ್ಣು ಮಂಜಾಗುತ್ತಿದೆ. ನಮ್ಮನ್ನು ಹೊತ್ತು ಹೆತ್ತು, ಮಮತೆಯ ಸುಧೆ ಹರಿಸಿ ಬೆಳೆಸಿದ ನಮ್ಮೆಲ್ಲರಿಗೂ ದಿವ್ಯ ಶಕ್ತಿಯಾಗಿದ್ದ ಅಮ್ಮನ ಮಧುರ ನೆನಪು ಸದಾ ಹಸಿರು, ನಮಗದುವೇ ಶ್ರೀರಕ್ಷೆ

# Bunts' Sangha R.N.S. Vidyaniketan
## A Report on Investiture Ceremony




"Leaders instill in their people a hope for success and a belief in themselves." The Investiture Ceremony of Bunts' Sangha R.N.S Vidyaniketan and Composite P U College was organised on 1st of August 2025 at RTB Auditorium. The elected leaders were assigned responsibilities by pinning the badges on to their lapel wherein they accepted their portfolios happily.

As a part of the formal proceedings, madam Principal, Smt. Usha Santhosh administered the oath of allegiance to the newly elected Student Council. Speaking on the occasion, the Chief Guest Shri Ramesh, Retd. Hawaldar Central Reserve Police Force emphasised on the contribution of every individual towards nation building. His professional experience was an eye-opener for the gathering.




The ceremony took its momentum with inspirational and thought provoking words shared by the Honourable President and Chairman CA. Ashok Shetty, Bunts' Sangha Bangalore and Vijay J. Shetty Halady, Honorary Secretary and Convenor of Bunts' Sangha R. N.S. Vidyaniketan. The Investiture Ceremony culminated with the proposal of vote of thanks and a unison recital of the National Anthem.

### Auditorium Booking Status as on 10.08.2025

| S.N. | Booking Date | Prog. Date | Party name | Booking Category<br>Member / Non Member | Prog. Details |
|---|---|---|---|---|---|
| 1 | 14.7.2025 | 10.12.2025 | Balakrishna Shetty H | Member | Wedding reception |
| 2 | 16.7.2025 | 21.11.2025 | Umesh B | Non-Member | Beegara Oota |
| 3 | 31.7.2025 | 26.09.2025 to 27.09.2025 | Rambo circus | Non-Member | Social service |
| 4 | 31.7.2025 | 26.10.2025 | Karavali sports and cultural academy | Non-Member | Coastal orga |
| 5 | 07.8.2025 | 23.8.2025 | Karnataka Rajya Bekery Condiments mattu sanna uddimedarara okkuta | Non-Member | Amavasye booking |
| 6 | 07.8.2025 | 21.9.2025 | Telecom Employees Co-operative Housing Society Limited | Non-Member | Social service |

# ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಶಾಲೆಯ 2025–26ನೇ ಸಾಲಿನ ನೂತನ ವಿದ್ಯಾರ್ಥಿ ಮಂತ್ರಿಮಂಡಲದ ಪದಗ್ರಹಣ ಸಮಾರಂಭದ ವರದಿ



ದಿನಾಂಕ 19.07.2025ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಶಾಲೆಯ 2025–26ನೇ ಸಾಲಿನ ನೂತನ ವಿದ್ಯಾರ್ಥಿ ಮಂತ್ರಿಮಂಡಲದ ಪದಗ್ರಹಣ ಸಮಾರಂಭವು ಅತ್ಯಂತ ಸಂಭ್ರಮದಿಂದ ಜರುಗಿತು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವ ಮತ್ತು ಜವಾಬ್ದಾರಿಯನ್ನು ಕಲಿಸುವ ಉದ್ದೇಶವನ್ನು ಹೊಂದಿತ್ತು. ಬೆಂಗಳೂರು ಬಂಟರ ಸಂಘದ ಅಧ್ಯಕ್ಷರು ಹಾಗೂ ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ.ರವರು ಹಾಗೂ ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ಮತ್ತು ಖಜಾಂಚಿಯವರಾದ ಶ್ರೀ ಅಶೋಕ್ ಕುಮಾರ್ ಶೆಟ್ಟಿಯವರು ಉಪಸ್ಥಿತರಿದ್ದರು. ಸಮಾರಂಭವು ರಾಷ್ಟ್ರಗೀತೆಯೊಂದಿಗೆ ಪ್ರಾರಂಭವಾಯಿತು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಎಲಿಲ್ ಅರಸಿಯವರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿ ಸಮಾರಂಭದ ಮಹತ್ವದ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಿದರು.

ನೂತನವಾಗಿ ಆಯ್ಕೆಯಾದ ವಿದ್ಯಾರ್ಥಿ ನಾಯಕರುಗಳಿಗೆ ಗೌರವಪೂರ್ವಕವಾಗಿ ಅವರ ಸ್ಥಾನಗಳಿಗೆ ಅನುಗುಣವಾಗಿ ಬ್ಯಾಡ್ಜ್‌ಗಳನ್ನು ಮತ್ತು ಜವಾಬ್ದಾರಿಯ ಪಟ್ಟಿಗಳನ್ನು ಪ್ರಧಾನ ಮಾಡಲಾಯಿತು. ಶಾಲಾ ನಾಯಕನಾಗಿ ಆಯ್ಕೆಯಾದ ಶಶಾಂಕ್ ಮತ್ತು ಉಪನಾಯಕಿಯಾಗಿ ಆಯ್ಕೆಯಾದ ಕುಮಾರಿ ಶ್ರೇಯಾ ಅವರಿಗೆ ಮುಖ್ಯ ಅತಿಥಿಗಳು ಬ್ಯಾಡ್ಜ್‌ಗಳನ್ನು ನೀಡಿ ಗೌರವಿಸಿದರು. ಅದೇ ರೀತಿ ಎಲ್ಲಾ ಮಂತ್ರಿಮಂಡಲದ 20 ಸದಸ್ಯರಿಗೆ ಅವರ ಜವಾಬ್ದಾರಿಗಳಾದ ಕ್ರೀಡಾ ಮಂತ್ರಿ, ಸಾಂಸ್ಕೃತಿಕ ಮಂತ್ರಿ, ಶಿಸ್ತು ಮಂತ್ರಿ ಇತ್ಯಾದಿಗಳಿಗೆ ಅನುಗುಣವಾಗಿ ಬ್ಯಾಡ್ಜ್‌ಗಳನ್ನು ವಿತರಿಸಲಾಯಿತು.

ಪದಗ್ರಹಣದ ನಂತರ, ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ತಮ್ಮ ಭಾಷಣದಲ್ಲಿ ವಿದ್ಯಾರ್ಥಿ ಜೀವನದಲ್ಲಿ ನಾಯಕತ್ವದ ಪಾತ್ರ ಮತ್ತು ಜವಾಬ್ದಾರಿಯ ಮಹತ್ವವನ್ನು ಒತ್ತಿ ಹೇಳಿದರು. "ವಿದ್ಯಾರ್ಥಿ ನಾಯಕತ್ವವು ಕೇವಲ ಅಧಿಕಾರವಲ್ಲ, ಅದೊಂದು ದೊಡ್ಡ ಜವಾಬ್ದಾರಿ. ನೀವು ನಿಮ್ಮ ಸಹಪಾಠಿಗಳಿಗೆ ಮಾದರಿಯಾಗಿ ನಿಲ್ಲಬೇಕು ಮತ್ತು ಶಾಲೆಯ ನಿಯಮಗಳನ್ನು ಪಾಲಿಸಬೇಕು" ಎಂದು ಸಲಹೆ ನೀಡಿದರು.

ಶಾಲಾ ನಾಯಕನಾಗಿ ಆಯ್ಕೆಯಾದ ಶಶಾಂಕ್‌ರವರು ತಮ್ಮ ಭಾಷಣದಲ್ಲಿ ನಮಗೆ ಈ ಜವಾಬ್ದಾರಿಯನ್ನು ವಹಿಸಿದ್ದಕ್ಕಾಗಿ ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು ಹಾಗೂ ಎಲ್ಲಾ ವಿದ್ಯಾರ್ಥಿಗಳಿಗೆ ಧನ್ಯವಾದಗಳು. ನಮ್ಮ ತಂಡದೊಂದಿಗೆ ಶಾಲೆಯ ಗೌರವವನ್ನು ಹೆಚ್ಚಿಸಲು ಮತ್ತು ಶಾಲೆಯ ಅಭಿವೃದ್ಧಿಗೆ ಶ್ರಮಿಸುತ್ತೇವೆ ಎಂದು ಪ್ರತಿಜ್ಞೆ ಮಾಡಿದರು.

ಕಾರ್ಯಕ್ರಮದ ಕೊನೆಯಲ್ಲಿ ವಂದನಾರ್ಪಣೆಯನ್ನು ಶಾಲೆಯ ಮುಖ್ಯ ಶಿಕ್ಷಕರಾದ ಚಂದ್ರಶೇಖರ್ ರೆಡ್ಡಿಯವರು ಮಾಡಿದರು. ಇಡೀ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಹೊಸ ಉತ್ಸಾಹ ಮತ್ತು ಜವಾಬ್ದಾರಿಯ ಪ್ರತಿಜ್ಞೆಯನ್ನು ಮೂಡಿಸಿತು. ಭವಿಷ್ಯದ ನಾಯಕರನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಈ ಸಮಾರಂಭವು ಒಂದು ಪ್ರಮುಖ ಹೆಜ್ಜೆಯಾಗಿತ್ತು.

# ಗೀತಾ ಜ್ಞಾನ ಯಜ್ಞ (ಜ್ಞಾನ) ಭಕ್ತಿಯ ಮಹಿಮೆ – ವರದಿ

ಗೀತಾ ಜ್ಞಾನ ಯಜ್ಞದ ಪ್ರಮುಖ ರೂವಾರಿಗಳೂ, ಚಿನ್ಮಯ ಮಿಷನ್ ಕರ್ನಾಟಕದ ಮುಖ್ಯಸ್ಥರಾದ ಪರಮಪೂಜ್ಯ ಬ್ರಹ್ಮಾನಂದರನ್ನೂ ಶ್ರೀ ವರಸಿದ್ಧಿ ವಿನಾಯಕ ಮಂದಿರದಲ್ಲಿ ಹಾರ್ದಿಕವಾಗಿ ಭಕ್ತಿ ಭಾವಗಳಿಂದ ನಮಿಸಿ ಸ್ವಾಗತಿಸಿ ಪ್ರಾರ್ಥನಾ ಮಂದಿರದಲ್ಲಿ ವಿನಾಯಕನಿಗೆ ವಿಶೇಷ ಪೂಜೆ ಸಲ್ಲಿಸಿ, ಪೂರ್ಣಕುಂಭದೊಂದಿಗೆ ಮೆರವಣಿಗೆಯಲ್ಲಿ ಸಭಾಂಗಣಕ್ಕೆ ಕರೆತರಲಾಯ್ತು.

ಬಂಟರ ಸಂಘ ಬೆಂಗಳೂರು ಹಾಗೂ ಚಿನ್ಮಯ ಮಿಷನ್ ಬೆಂಗಳೂರು ಸಂಯುಕ್ತ ಆಶ್ರಯದಲ್ಲಿ 27 ಸಂವತ್ಸರಗಳಿಂದ ನಡೆದು ಬಂದಿರುವ ಧಾರ್ಮಿಕ ಕಾರ್ಯಕ್ರಮ ಗೀತಾಜ್ಞಾನ ಯಜ್ಞ ಭಕ್ತಿಯ ಮಹಿಮೆ 06.07.2025ರಿಂದ 13.07.2025ರವರೆಗೆ ಪ್ರತಿದಿನ ಸಾಯಂಕಾಲ 6.30ರಿಂದ 8.00 ಘಂಟೆಯವರೆಗೆ ನಮ್ಮ ಸಭಾಭವನದಲ್ಲಿ ಪರಮಪೂಜ್ಯ ಶ್ರೀ ಬ್ರಹ್ಮಾನಂದ ಸ್ವಾಮೀಜಿಯವರ ಪ್ರವಚನದೊಂದಿಗೆ ನಡೆದು ಆಧ್ಯಾತ್ಮ ಬಂಧುಗಳು ಮನದಾಳದ ಹೊಸ ತನದ ಹುಡುಕಾಟ ಮನಸ್ಸು ಬುದ್ಧಿಗಳ ನಿಯಂತ್ರಣ ಮಾತ್ರವಲ್ಲ ಬಂಟ ಬಂಧುಗಳ ಜೊತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಇತರ ಸಮಾಜದ ಆದ್ಯಾತ್ಮ ಬಂಧುಗಳ ಸಮಾಗಮ, ಸದಾವಕಾಶ, ಸಮಯದ ಸದ್ವಿನಿಯೋಗದೊಂದಿಗೆ ನೆನಪಿನಂಗಳದಲ್ಲಿ ಚಿರಸ್ಥಾಯಿಯಾಗಿ ಉಳಿಯತಕ್ಕಂತಹ ಅಪರೂಪದ ಸುಯೋಗವೆಂದರೂ ಅತಿಶಯೋಕ್ತಿಯಲ್ಲ. ಭಾಗವಹಿಸಿದ ಎಲ್ಲಾ ಆಧ್ಯಾತ್ಮಿಕ ಬಂಧುಗಳ ದನ್ಯೋಸ್ತು ಎಂಬ ಶಾಂತ ಭಾವದೊಂದಿಗೆ ಭಕ್ತಿಯ ಹೊನಲು ಹರಿದು ಸಭಾಂಗಣದ ತುಂಬಾ ಮೈ ಮನಗಳನ್ನು ನೀರವ ಮೌನದೊಂದಿಗೆ ಆಲಿಸಿ, ಪಾಲಿಸಿ ಬಂಟರ ಸಂಘ ಬೆಂಗಳೂರಿನ ಧಾರ್ಮಿಕ ಪ್ರಜ್ಞೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸಿ ಚಾರಿಟೇಬಲ್ ನೆಲೆಗೊಂದು ಕಿರು ಕಾಣಿಕೆ ನೀಡಿ ಜನಮಾನಸದಲ್ಲಿ ನಿಲ್ಲುವಲ್ಲಿ ಯಶಸ್ವಿಯಾಗಿದೆ.



6ನೇ ತಾರೀಕು ಉದ್ಘಾಟನಾ ಸರಳ ಸಮಾರಂಭ ಸಾಂಕೇತಿಕವೂ ಸಾಂದರ್ಭಿಕವೂ ನೆಲೆಯಲ್ಲಿ ಪರಸ್ಪರ ಕಿರು ಪರಿಚಯ ವಿನಿಮಯದೊಂದಿಗೆ, ವೇದಿಕೆಯನ್ನು ಪರಮಪೂಜ್ಯ ಶ್ರೀ ಬ್ರಹ್ಮಾನಂದರು ವಿಜೃಂಭಿಸಿದರೆ, ಚಿನ್ಮಯ ಮಿಷನ್ ಅಧ್ಯಕ್ಷರಾದ ಕೃಷ್ಣಮೂರ್ತಿ ಬಂಟರ ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿಯವರು ಅಯೋಧ್ಯ ಪ್ರವಾಸದಲ್ಲಿದ್ದ ನಿಮಿತ್ತ ಬಂಟರ ಸಂಘದ ಉಪಾಧ್ಯಕ್ಷ ಶ್ರೀ ಜೆ. ಸಂತೋಷ್ ಶೆಟ್ಟಿಯವರು, ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ಹಾಗೂ ಚಿನ್ಮಯ ಬಳಗದ ವಿಜಯನಗರ ಸಂಚಾಲಕ ಶ್ರೀ ಡಿ. ಚಂದ್ರಹಾಸ ರೈಯವರು ವೇದಿಕೆಯಲ್ಲಿದ್ದು, ಶ್ರೀ ರೈಯವರು ಸ್ವಾಗತಿಸಿ ಹಿರಿಯರೂ, ಚಿನ್ಮಯ ಮಿಷನ್ ಚಟುವಟಿಕೆಗಳಿಗೆ ಕೊಡುಗೈ ದಾನಿಗಳೂ, ಹಲವಾರು ವರ್ಷಗಳಿಂದ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ಅಲಂಕಾರದ ವ್ಯವಸ್ಥೆಯನ್ನು ಅನುಚಾನಾವಾಗಿ ನಡೆಸಿಕೊಟ್ಟ, ಇರ್ಮಾಡಿ ಶ್ರೀ ಜಯಪ್ರಸಾದ್ ಶೆಟ್ಟಿಯವರು ಸ್ವಾಮೀಜಿಯವರನ್ನು ಗೌರವಿಸುವಲ್ಲಿ ಪಾಲ್ಗೊಂಡರು ಹಾಗೂ ಅಂದಿನ ಪ್ರಸಾದ ವಿತರಣೆಯನ್ನೂ ನಡೆಸಿಕೊಟ್ಟರು.

ಉಪಾಧ್ಯಕ್ಷರಾದ ಶ್ರೀ ಜೆ. ಸಂತೋಷ್ ಶೆಟ್ಟಿಯವರು ಉದ್ಘಾಟನೆಗೈದರು. ಶ್ರೀ ಚಂದ್ರಹಾಸ ರೈಯವರು ಪರಮಪೂಜ್ಯ ಬ್ರಹ್ಮಾನಂದರವರನ್ನು, ಆಧ್ಯಾತ್ಮ ಬಂಧುಗಳನ್ನು ಹಾಗೂ ಸಂಘದ ಉಪಾಧ್ಯಕ್ಷೆ ಶ್ರೀಮತಿ ಕಾಂತಿ ಶೆಟ್ಟಿ, ಜೊತೆ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ. ರೈ, ಖಜಾಂಚಿ ಶ್ರೀ ಅಶೋಕ್ ಕುಮಾರ್ ಶೆಟ್ಟಿ ಹೆಚ್. ಹಾಗೂ ನೆರೆದ ಎಲ್ಲಾ ಬಂಟ ಬಂಧುಗಳನ್ನು ಸ್ವಾಗತಿಸಿದರು. ಸಮಾರಂಭದಲ್ಲಿ ಸಂಘದ ಮಾಜಿ ಅಧ್ಯಕ್ಷ ಶ್ರೀ ಕೆ. ಭಗವಾನ್‌ದಾಸ್ ರೈಯವರು ಉಪಸ್ಥಿತರಿದ್ದರು. ವಿಶೇಷವಾಗಿ ಕಾರ್ಯಕಾರಿ ಸಮಿತಿ ಸದಸ್ಯರುಗಳು ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕಾರ ನೀಡಿದರು.

ವಿದ್ಯುಕ್ತವಾಗಿ ಸ್ವಾಮೀಜಿಯವರಿಗೆ ವೇದಿಕೆಯನ್ನು ತೆರವು ಮಾಡಿ ಚಿನ್ಮಯ ಆರತಿಯೊಂದಿಗೆ, ಪ್ರವಚನದ ಪ್ರಾರಂಭ, ಭಕ್ತಿಯ ಮಹಿಮೆ–ಗೀತಾಧಾರಿತ. ಬ್ರಹ್ಮಾಜಿಯವರ ಅನುಭವ, ಸರಳ ವ್ಯಾಖ್ಯಾನ, ಗೀತೆಯೊಂದಿಗೆ ಉದಾಹರಣೆ, ಮಂಕುತಿಮ್ಮನ ಕಗ್ಗದ ವಿಶ್ಲೇಷಣೆ ಆಧ್ಯಾತ್ಮ ಬಂಧುಗಳನ್ನು ಮಂತ್ರಮುಗ್ಧರನ್ನಾಗಿಸಿ, ನೆರೆದ ಸಭಾಸಕ್ತರ, ನರನಾಡಿಗಳಲ್ಲಿ ಮಂತ್ರಘೋಷಗಳ ಭಕ್ತಿಯ ಸಿಂಚನದ ಸಂಚಲನ ಹರಿದು ಬಂತು.

ಹೀಗೆಯೇ ಪ್ರತಿದಿನ ಅರ್ಧ ಗಂಟೆ ಭಜನೆ. ಕೊನೆಯ ದಿನ ನಮ್ಮ ಬಂಟರ ಸಂಘದ ಪ್ರಾರ್ಥನಾ ಸಮಿತಿಯ ಭಜನಾ ತರಗತಿಯ ನೂರಕ್ಕೂ ಮಿಕ್ಕಿದ ಮಕ್ಕಳ ಭಜನಾ ವೃಂದ ಭಕ್ತಿಯ ರಸದಾರೆಯನ್ನು ನೀಡಿ ಸೈ ಎನಿಸಿಕೊಂಡರು. 13.07.2025 ವ್ಯಾಸ ಪೂಜೆ ಹಾಗೂ ಗುರು ಪಾದುಕಾ ಪೂಜೆ ನಡೆದು ಸ್ವಾಮೀಜಿಯವರಿಗೆ ಸಂಘದ ಗೌರವಾರ್ಪಣೆ ಸಂಘದ ವತಿಯಿಂದ ಪ್ರಸಾದ ವಿತರಣೆಯೊಂದಿಗೆ 27ನೇ ಸಂವತ್ಸರದ ಗೀತಾ ಜ್ಞಾನ ಯಜ್ಞ ಸಂಪನ್ನಗೊಂಡಿತು.

ಕೊನೆಯ ದಿನ ಯಜ್ಞದ ಸಂಚಾಲಕರಾದ ದರ್ಬೆ ಚಂದ್ರಹಾಸ ರೈಯವರು ಯಜ್ಞದ ಯಶಸ್ಸಿನಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಪೂಜ್ಯ ಸ್ವಾಮೀಜಿಯವರೊಂದಿಗೆ ಚಿನ್ಮಯ ಮಿಷನ್ ಹಾಗೂ ಬಂಟರ ಸಂಘದ ಆಡಳಿತ ಮಂಡಳಿ, ಕಾರ್ಯಕಾರಿ ಸಮಿತಿ ಹಾಗೂ ಸಹಕರಿಸಿದ ಎಲ್ಲಾ ಮಹನೀಯರಿಗೆ ಆತ್ಮೀಯ ಧನ್ಯವಾದ ಸಮರ್ಪಿಸಿದರು. ಯಜ್ಞದ ಕೊನೆಯಲ್ಲಿ ವರುಣದೇವನ ಕೃಪೆಯೊಂದಿಗೆ ಮಳೆ ಬಂದು ನಿಂತಿತು– ದೈವ ಸಂಕಲ್ಪ.

**ಜಯಶ್ರೀ ಸಿ. ರೈ**
**ಜೊತೆ ಕಾರ್ಯದರ್ಶಿ**

## ಅಭಿನಂದನೆಗಳು



ಬೆಂಗಳೂರು ನಗರದ ಬಿಎಂಎಸ್ ಆರ್ಕಿಟೆಕ್ಟ್ ಕಾಲೇಜಿನ ಗ್ರಂಥಾಲಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿರುವ ಮತ್ತು ನಮ್ಮ ಸಮುದಾಯದ ಪ್ರತಿಭಾವಂತ ಸದಸ್ಯರಾಗಿರುವ ಡಾ. ಎಸ್.ಯು. ಶಿವಕುಮಾರ ಶೆಟ್ಟಿ ಅವರಿಗೆ ತುಮಕೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ (ಪಿ.ಎಚ್.ಡಿ) ಪದವಿ ಲಭಿಸಿದೆ. ಜುಲೈ 8, 2025ರಂದು ನಡೆದ 18ನೇ ಘಟಿಕೋತ್ಸವ ಸಮಾರಂಭದಲ್ಲಿ ಡಾಕ್ಟರೇಟ್ ಪದವಿಯನ್ನು ಕರ್ನಾಟಕ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರಿಂದ ಸ್ವೀಕರಿಸಿದರು.

"Scholarly Productivity and Publishing Practices of Indian Library and Information Science Professionals An Exploratory Study" ಎಂಬ ಶೀರ್ಷಿಕೆಯ ಅಧ್ಯಯನಕ್ಕಾಗಿ ಡಾಕ್ಟರೇಟ್ ಲಭಿಸಿದ್ದು, ಈ ಮಹತ್ವಪೂರ್ಣ ಶೋಧಕಾರ್ಯವನ್ನು ಅವರು ತುಮಕೂರು ವಿಶ್ವವಿದ್ಯಾನಿಲಯದ ಪ್ರೊಫೆಸರ್ ಬಿ.ಟಿ ಸಂಪತ್ ಕುಮಾರ್ ಮಾರ್ಲ ಅವರ ಮಾರ್ಗದರ್ಶನದಲ್ಲಿ ಪೂರೈಸಿದ್ದಾರೆ.

ಇವರು ಮೂಲತಃ ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟದವರಾಗಿದ್ದು, ಶ್ರೀ ಉದಯ್ ಕುಮಾರ್ ಶೆಟ್ಟಿ ಮತ್ತು ಶ್ರೀಮತಿ ಲಲಿತಾ ಶೆಟ್ಟಿ ದಂಪತಿಯ ಪುತ್ರ ಹಾಗೂ ಪತ್ರಕರ್ತ ಶ್ರೀ ಕಿರಿಕ್ ಕೀರ್ತಿರವರ ಸಹೋದರ. ಇವರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ಪ್ರಾರ್ಥನಾ ಮಂದಿರ ಸಮಿತಿ – ಭಜನಾ ತರಗತಿ ಉದ್ಘಾಟನಾ ಕಾರ್ಯಕ್ರಮ

ಜುಲೈ 19ರಂದು ಆರ್.ಎನ್.ಎಸ್ ವಿದ್ಯಾನಿಕೇತನ–2 ಶಾಲೆಯಲ್ಲಿ ಪ್ರಾರ್ಥನಾ ಮಂದಿರ ಸಮಿತಿಯ ವತಿಯಿಂದ ಉಚಿತ ಭಜನೆ ತರಬೇತಿ ಉದ್ಘಾಟನೆಗೊಂಡಿತು. ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರಾದ ಶ್ರೀಮತಿ ದೀಪಾ ಶೆಟ್ಟಿ ಮತ್ತು ಶ್ರೀಮತಿ ಅಕ್ಷತಾ ಶೆಟ್ಟಿಯವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭಗೊಂಡಿತು.



ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಶೇಖರವರು ಆಗಮಿಸಿದವರಿಗೆ ಸ್ವಾಗತವನ್ನು ಕೋರಿದರು. ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿಯವರು ದೀಪ ಬೆಳಗಿಸಿ ಭಜನೆಯ ಕುರಿತು ಮಕ್ಕಳಿಗೆ ಅರಿವನ್ನು ಮೂಡಿಸಿದರು. ಉಪಾಧ್ಯಕ್ಷರಾದ ಶ್ರೀ ಸಂತೋಷ್ ಶೆಟ್ಟಿ ಜೆ., ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ, ಜೊತೆ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ. ರೈ, ಪ್ರಾಂಶುಪಾಲರು, ಕಾರ್ಯಕಾರಿ ಸಮಿತಿ ಸದಸ್ಯರು, ಪ್ರಾರ್ಥನಾ ಮಂದಿರ ಉಪ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರಾದ ಶ್ರೀ ಧರ್ಮಪ್ರಸಾದ್ ರೈಯವರು ಕಾರ್ಯಕ್ರಮದ ನಿರೂಪಣೆಯನ್ನು ಅಚ್ಚುಕಟ್ಟಾಗಿ ಮಾಡಿದರು.



ಸಂಚಾಲಕರಾದ ಶ್ರೀ ಪ್ರಸಾದ್ ಶೆಟ್ಟಿಯವರ ಧನ್ಯವಾದ ಸಮರ್ಪಣೆಯ ನಂತರ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–2 ಭಜನೆ ತರಬೇತುದಾರರಾದ ಶ್ರೀ ಹರೀಶ್ ಶೆಟ್ಟಿ ಮತ್ತು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–2ರ ಮಕ್ಕಳಿಂದ ಭಜನೆ ಕಾರ್ಯಕ್ರಮ ನಡೆಯಿತು. ವಿಶೇಷವಾಗಿ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಜೊತೆ ಕಾರ್ಯದರ್ಶಿಗಳು, ಪ್ರಾಂಶುಪಾಲರು ಭಜನೆಯನ್ನು ಹಾಡಿದರು. ಮಹಾ ಮಂಗಳಾರತಿಯೊಂದಿಗೆ ಭಜನೆ ಮುಕ್ತಾಯಗೊಂಡಿತು. ಕೊನೆಯಲ್ಲಿ ಎಲ್ಲರಿಗೂ ಪ್ರಸಾದ ವಿತರಣೆಯನ್ನು ಸಮಿತಿ ಸದಸ್ಯರು ಮಾಡಿದರು. ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಕೇಸರಿ ಬಣ್ಣದ ಶಾಲು ಕೊಡಲಾಯಿತು. ಸುಮಾರು 250 ಮಕ್ಕಳು ಈ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ನಮಗೆ ಸಹಕರಿಸಿದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–2 ಸಿಬ್ಬಂದಿ ವರ್ಗದವರಿಗೆ ವಂದನೆಗಳು.

**ಪ್ರಸಾದ್ ಕುಮಾರ್ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**ಶೋಭಾ ಶೇಖ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

## ಅಭಿನಂದನೆಗಳು



**ಹರ್ಷಿತ್ ಶೆಟ್ಟಿ**

ಹರ್ಷಿತ್ ಶೆಟ್ಟಿ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 589/600 ಮಾರ್ಕ್ 98.37% ಅಂಕದೊಂದಿಗೆ ತೇರ್ಗಡೆ ಹೊಂದಿ NEET ರಾಷ್ಟ್ರೀಯ ಪರೀಕ್ಷೆಯಲ್ಲಿ 589/700 ಅಂಕ ಪಡೆದು ಬೆಂಗಳೂರು ವೈದ್ಯಕೀಯ ಕಾಲೇಜಿನ ಪ್ರವೇಶ ಪಡೆದಿರುತ್ತಾರೆ. ಇವರು ಪ್ರಾಥಮಿಕ ಶಿಕ್ಷಣವನ್ನು ನಮ್ಮ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯಲ್ಲಿ ಪಡೆದಿರುತ್ತಾರೆ. ಇವರು ಬಗ್ವಾಡಿ ಮೆತ್ತಿನಮನೆ ಶ್ರೀ ಸೀತಾರಾಮ ಶೆಟ್ಟಿ ಮತ್ತು ಮಠದಬೆಟ್ಟು ಶ್ರೀಮತಿ ಜಯಶ್ರೀ ಶೆಟ್ಟಿ ದಂಪತಿಗಳ ಪುತ್ರ. ಇವರಿಗೆ ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# ಬಂಟರ ಸಂಘ ಬೆಂಗಳೂರು–ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26





ಬಂಟರ ಸಂಘ ಪುತ್ತೂರು ರಿ. ಹಾಗೂ ಬೆಂಗಳೂರು ಬಂಟರ ಸಂಘ ಮತ್ತು ಬಂಟರ ಯಾನೆ ನಾಡವರ ಮಾತೃ ಸಂಘ, ಪುತ್ತೂರು ತಾಲೂಕು ಮಹಿಳಾ ವಿಭಾಗ ಮತ್ತು ಯುವ ವಿಭಾಗ ಇವರ ಸಂಯುಕ್ತ ಆಶ್ರಯದಲ್ಲಿ ಜುಲೈ 12, 2025ರಂದು, ಶನಿವಾರ ಬೆಳಿಗ್ಗೆ 9.00 ಘಂಟೆಗೆ ಪುತ್ತೂರು ಎಂ. ಸುಂದರಾಮ್ ಶೆಟ್ಟಿ ಸ್ಮಾರಕ ಬಂಟರ ಭವನದಲ್ಲಿ ಪೆರ್ಮೆದೆ ಬಂಟೆರ್ ಸಾಧಕರಿಗೆ ಸನ್ಮಾನ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮವು ನಡೆಯಿತು.

ಬೆಂಗಳೂರು ಬಂಟರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ವಿತರಣೆಗೆ ರೂ. 50,000/– ವನ್ನು ನೀಡಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಮ್ಮ ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿ ಎಂ., ಹಾಗೂ ಜೊತೆ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ. ರೈ ಮತ್ತು ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಉಮೇಶ್ ಕುಮಾರ್ ಶೆಟ್ಟಿಯವರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತಾಡಿದ ಸಿ.ಎ. ಅಶೋಕ್ ಶೆಟ್ಟಿ ಎಂ.ರವರು ಬಂಟ ಸಮಾಜ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು ಮತ್ತು ನಮ್ಮ ಸಮಾಜದಲ್ಲಿ ಯಾರೂ ಕೂಡಾ ಶಿಕ್ಷಣದಲ್ಲಿ ವಂಚಿತರಾಗದೆ ಉನ್ನತ ಶಿಕ್ಷಣವನ್ನು ಪಡೆಯಬೇಕೆಂಬ ಉದ್ದೇಶದಿಂದ ಉಚಿತ ಪಿಯುಸಿ ಶಿಕ್ಷಣವನ್ನು ಬೆಂಗಳೂರು ಬಂಟರ ಸಂಘವು ನೀಡುತ್ತಿದೆ. ಉನ್ನತ ಶಿಕ್ಷಣಕ್ಕೆ ಬಡ್ಡಿರಹಿತ ವಿದ್ಯಾರ್ಥಿ ವೇತನ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಬಹುದು ಎಂದು ತಮ್ಮ ನುಡಿಯಲ್ಲಿ ನುಡಿದರು. ಶ್ರೀಮತಿ ಜಯಶ್ರೀ ಸಿ. ರೈಯವರು ಮಾತನಾಡಿ ಪುತ್ತೂರು ಬಂಟರ ಸಂಘಕ್ಕೆ ಉತ್ತಮ ಹೆಸರಿದೆ ಇಲ್ಲಿನ ಕಾರ್ಯಕ್ರಮಗಳು ಸಮಾಜಕ್ಕೆ ಪೂರಕವಾಗಿದೆ ಎಂದರು. ಶ್ರೀ ಉಮೇಶ್ ಕುಮಾರ್ ಶೆಟ್ಟಿಯವರು ಮಾತನಾಡಿ ಪುತ್ತೂರು ಸಂಘದ ಅಧ್ಯಕ್ಷರ ಒಳ್ಳೆಯ ಕಾರ್ಯಕ್ರಮಗಳನ್ನು ಶ್ಲಾಘಿಸಿದರು. ಬೆಂಗಳೂರು ಬಂಟರ ಸಂಘದಲ್ಲಿ ನೀಡುವ ಎಲ್ಲಾ ಯೋಜನೆಗಳ ವಿವರವನ್ನು ಸಭೆಯಲ್ಲಿ ತಿಳಿಸಿದರು. ವೇದಿಕೆಯಲ್ಲಿ ಕುಂಬ್ರ ಶ್ರೀ ರಘುನಾಥ ರೈ, ಶ್ರೀ ಸೀತಾರಾಮ ರೈ, ಶ್ರೀ ಅರಿಯಡ್ಕ ಚಿಕ್ಕಪ್ಪ ನಾಯಕ್, ಶ್ರೀ ಶಶಿಕುಮಾರ್ ರೈ ಬಾಲ್ಯೋಟು, ಶಾಸಕರಾದ ಶ್ರೀ ಅಶೋಕ್ ಕುಮಾರ್ ರೈಯವರು ಉಪಸ್ಥಿತರಿದ್ದರು.







ಗುರುಪುರ ಬಂಟರ ಮಾತೃ ಸಂಘ ರಿ. ಇವರ ಆಶ್ರಯದಲ್ಲಿ ಬಂಟರ ಯಾನೆ ನಾಡವರ ಮಾತೃ ಸಂಘ ರಿ. ಮಂಗಳೂರು, ಜಾಗತಿಕ ಬಂಟರ ಸಂಘಗಳ ಒಕ್ಕೂಟ ರಿ. ಮಂಗಳೂರು ಹಾಗೂ ಬೆಂಗಳೂರು ಬಂಟರ ಸಂಘ ಇವರ ಸಹಯೋಗದೊಂದಿಗೆ 12ನೇ ವಾರ್ಷಿಕ ಸಮಾವೇಶ ಮತ್ತು ಸಮಾಜ ವಿವಿಧ ಭಾಗದಲ್ಲಿ ಸೇವೆ ಸಲ್ಲಿಸಿದವರನ್ನು ಗುರುತಿಸಿ ಕೊಡಮಾಡುವ ಪ್ರಶಸ್ತಿ, ಸಾಧಕರಿಗೆ ಸನ್ಮಾನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ ಸಮಾರಂಭ ಕಾರ್ಯಕ್ರಮವನ್ನು

ದಿನಾಂಕ 13.07.2025ರಂದು, ಭಾನುವಾರದಂದು ಮಧ್ಯಾಹ್ನ 2.00 ಗಂಟೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಪಿಲಿಕುಳ, ಮೂಡುಶೆಡ್ಡೆ ಸಭಾಭವನದಲ್ಲಿ ನಡೆಯಿತು. ಬೆಂಗಳೂರು ಬಂಟರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ವಿತರಣೆಗೆ ರೂ. 50,000/– ವನ್ನು ನೀಡಲಾಗಿದೆ. ಇದೇ ಸಂದರ್ಭದಲ್ಲಿ ನಮ್ಮ ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿ ಎಂ. ಇವರನ್ನು ಸನ್ಮಾನಿಸಲಾಯಿತು. ಸನ್ಮಾನವನ್ನು ಸ್ವೀಕರಿಸಿ ಸಭೆಯನ್ನುದ್ದೇಶಿಸಿ ನಮ್ಮ ಸಂಘದ ವತಿಯಿಂದ ಉಚಿತವಾಗಿ ಗುರುಪುರದಿಂದ ಯಾವುದೋ ವಿದ್ಯಾರ್ಥಿ ಐ.ಎ.ಎಸ್ ಹಾಗೂ ಕೆ.ಎ.ಎಸ್. ಕೋಚಿಂಗ್ ಪಡೆಯಲು ಬಂದರೆ ಅವರಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ಸ್ವಾಮೀಜಿಯವರಿಗೆ ಆಶ್ವಾಸನೆ ನೀಡಿದರು ಮತ್ತು ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ನೀಡುವುದಾಗಿ ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಮ್ಮ ಸಂಘದ ಗೌರವ ಕಾರ್ಯದರ್ಶಿಯವರಾದ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ವಹಿಸಿ, ಸಭೆಯನ್ನುದ್ದೇಶಿಸಿ ಬೆಂಗಳೂರು ಬಂಟರ ಸಂಘಕ್ಕೂ, ಗುರುಪುರ ಬಂಟರ ಸಂಘಕ್ಕೂ ಅವಿನಾಭಾವ ಸಂಬಂಧವಿದೆ, ಸಂಘದಿಂದ ನೀಡುವ ಎಲ್ಲಾ ಯೋಜನೆಗಳ ವಿವರವನ್ನು ನೀಡಿದರು. ಮತ್ತು ತಮ್ಮ ವೈಯಕ್ತಿಕ ನೆಲೆಯಲ್ಲಿಯೂ ಗುರುಪುರ ಸಂಘಕ್ಕೆ ಸಹಾಯ ಮಾಡುತ್ತಿದ್ದು ಮುಂದೆಯೂ ಮಾಡುವುದಾಗಿ ತಿಳಿಸಿದರು. ವೇದಿಕೆಯಲ್ಲಿ ಶ್ರೀ ಮಾಲಾಡಿ ಅಜಿತ್ ಕುಮಾರ್ ಶೆಟ್ಟಿ, ಮಾಜಿ ಸಂಸದರಾದ ಶ್ರೀ ನಳಿನ್ ಕುಮಾರ್ ಕಟೀಲ್, ಶಾಸಕರಾದ ಡಾ. ವೈ ಭರತ್ ಶೆಟ್ಟಿ ಹಾಗೂ ಕಾಪು ಮಾರಿಗುಡಿಯ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾದ ಶ್ರೀ ದೇವಿಪ್ರಸಾದ್ ಶೆಟ್ಟಿ, ಮತ್ತಿತ್ತರರು ಉಪಸ್ಥಿತರಿದ್ದರು. ಸಭೆಯಲ್ಲಿ ಬೆಂಗಳೂರು ಬಂಟರ ಸಂಘದ ಜೊತೆ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ. ರೈ ಮತ್ತು ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಮೆನ್ ಶ್ರೀ ಉಮೇಶ್ ಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.

**ಸುಧಾಕರ ಶೆಟ್ಟಿ ಹಟ್ಟಿಯಂಗಡಿ**
ಸಂಚಾಲಕರು, ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್, ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ

---

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## ಸದಸ್ಯತ್ವ ಮತ್ತು ವೆಬ್‌ಸೈಟ್ ಸಮಿತಿ

**ವಿಶೇಷ ಸೂಚನೆ:–**

ಬೆಂಗಳೂರು ಬಂಟರ ಸಂಘದ ಸದಸ್ಯರಾಗಿದ್ದು, ನಿಮ್ಮ ಮೊಬೈಲ್ ನಂಬರ್ ಹಾಗೂ ವಿಳಾಸದ ನವೀಕರಣ/ ತಿದ್ದುಪಡಿ ಮಾಡಬೇಕಿದ್ದಲ್ಲಿ ದಯವಿಟ್ಟು ಮೊಬೈಲ್ ಸಂಖ್ಯೆ: 7022119739 ಈ ನಂಬರಿಗೆ ನೇರವಾಗಿ ವಾಟ್ಸಾಪ್ ಮೆಸೇಜ್ ಕಳುಹಿಸುವುದರ ಮೂಲಕ ಅಥವಾ ಸಂಘದ ಕಛೇರಿಯನ್ನು ಸಂಪರ್ಕಿಸಿ ನವೀಕರಣ ಮಾಡಿಸಿಕೊಳ್ಳಬಹುದು.

ಸದಸ್ಯರಿಗೆ ಬೇರೆ ಅಂಚೆ ಪತ್ರಗಳು ನಿಮ್ಮ ವಿಳಾಸಕ್ಕೆ ಸರಿಯಾಗಿ ತಲುಪುತ್ತಿದ್ದು, ಬಂಟರ ಸಂಘದ ಮಾಸಪತ್ರಿಕೆಯಾದ ಸ್ನೇಹ ಚಿಂತನೆಯು ತಲುಪುತ್ತಿಲ್ಲವಾದಲ್ಲಿ, ದಯವಿಟ್ಟು ನಿಮ್ಮ ಹತ್ತಿರದ ಅಂಚೆ ಕಛೇರಿಯನ್ನು ಸಂಪರ್ಕಿಸಿ ವಿಚಾರಿಸಬೇಕಾಗಿ ವಿನಂತಿ. ಸತತವಾಗಿ ಮೂರು ತಿಂಗಳಿನಿಂದ ಮಾಸ ಪತ್ರಿಕೆಯು ವಾಪಾಸ್ಸು ಬರುತ್ತಿದ್ದರೆ ನಂತರ ಅದೇ ವಿಳಾಸಕ್ಕೆ ಪ್ರತಿಯನ್ನು ಕಳುಹಿಸಲಾಗುವುದಿಲ್ಲ. ಒಂದು ಮನೆಗೆ ಒಂದಕ್ಕಿಂತ ಜಾಸ್ತಿ ಮಾಸಿಕ ಸ್ನೇಹ ಚಿಂತನೆ ಬರುತ್ತಿದ್ದರೆ, ದಯವಿಟ್ಟು ಸಂಘಕ್ಕೆ ಮಾಹಿತಿ ನೀಡಿ. ಅದನ್ನು ಕೂಡಲೇ ರದ್ದುಪಡಿಸಲಾಗುವುದು.

ಮೆಂಬರ್‌ಶಿಪ್ ನಂ. **LM018882** ರ ತನಕದ ಕಾರ್ಡುಗಳು ಸಂಘದ ಕಛೇರಿಯಲ್ಲಿ ಲಭ್ಯವಿದ್ದು, ಮೆಂಬರ್‌ಶಿಪ್ ಕಾರ್ಡನ್ನು ಸಂಗ್ರಹಿಸದೇ ಇರುವವರು, ಸಂಘದ ಕಛೇರಿಯಲ್ಲಿ ಪಡೆದುಕೊಳ್ಳಬೇಕಾಗಿ ವಿನಂತಿ.

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿ.ಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಸುನೀಲ್ ಶೆಟ್ಟಿ**
ಸಂಚಾಲಕರು

ಸದಸ್ಯತ್ವ ಸಮಿತಿ

**ಜಯಶ್ರೀ ಸಿ. ರೈ**
ಸಂಚಾಲಕರು

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸರ್ವ ಸದಸ್ಯರು, ಬಂಟರ ಸಂಘ ಬೆಂಗಳೂರು.**

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## ಕ್ರೀಡಾ ವಿಭಾಗ

# ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ – 2025–26

ಆತ್ಮೀಯ ಸದಸ್ಯರೇ,

2025–26ನೇ ಸಾಲಿನ 'ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ'ಕ್ಕೆ ತಮ್ಮೆಲ್ಲರನ್ನೂ ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ. ಸದಸ್ಯರೆಲ್ಲರೂ ಕ್ರೀಡಾ ಮನೋಭಾವದಿಂದ ತಮ್ಮ ಕುಟುಂಬ ಸದಸ್ಯರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತಿದ್ದೇವೆ.

## ಕ್ರೀಡಾಕೂಟದ ವಿವರ

| | | | |
|---|---|---|---|
| ಅಕ್ಟೋಬರ್ 12 ಭಾನುವಾರ | ಕ್ರೀಡಾಜ್ಯೋತಿ, ಉದ್ಘಾಟನೆ ಮತ್ತುಅಥ್ಲೆಟಿಕ್ಸ್ | ಬೆಳಿಗ್ಗೆ 8.30ಕ್ಕೆ. | ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ, ಸಾಯಿ ಗ್ರೌಂಡ್, ಜ್ಞಾನಭಾರತಿ, ಬೆಂಗಳೂರು |
| ಅಕ್ಟೋಬರ್ 26 ಭಾನುವಾರ | ಥ್ರೋಬಾಲ್ | ಬೆಳಿಗ್ಗೆ 9.00ಕ್ಕೆ | ದಿ. ಅನಂತ್ ಕುಮಾರ್ ಕ್ರೀಡಾಂಗಣ, ವಿಜಯಾ ಬ್ಯಾಂಕ್ ಲೇಔಟ್, ಬಿಳೇಕಹಳ್ಳಿ, ಬೆಂಗಳೂರು – 560076 |
| ನವೆಂಬರ್ 9 ಭಾನುವಾರ | ಶಟಲ್ ಬ್ಯಾಡ್ಮಿಂಟನ್ | ಬೆಳಿಗ್ಗೆ 8.30ಕ್ಕೆ. | ಅರ್ರೈಸ್ ಬ್ಯಾಡ್ಮಿಂಟನ್ ಅಕಾಡೆಮಿ, ಅಂಜನಾಪುರ, ಬೆಂಗಳೂರು – 560062 |
| ನವೆಂಬರ್ 23 ಭಾನುವಾರ | ಚೆಸ್, ಕೇರಂ, ಟೆನ್ನಿಕ್ವಾಟ್, ಟೇಬಲ್ ಟೆನ್ನಿಸ್ ಹಾಗೂ ವಾಲಿಬಾಲ್ | ಬೆಳಿಗ್ಗೆ 9.00ಕ್ಕೆ. | ಬಂಟರ ಸಂಘ ಮತ್ತು ಬಿ.ಎಸ್.ಆರ್.ಎನ್.ಎಸ್. ವಿದ್ಯಾನಿಕೇತನ – Iರ ಸಂಕೀರ್ಣ |

ಬೆಂಗಳೂರು ಬಂಟರ ಸಂಘದ 2025–26ನೇ ಸಾಲಿನ ಎಲ್ಲಾ ವಾರ್ಷಿಕ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಚಿಸುವವರು ಕಡ್ಡಾಯವಾಗಿ ಸಂಘದ ಸದಸ್ಯರಾಗಿದ್ದು ಸಮಾಜ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಸಬನ್ ಶೆಟ್ಟಿ ಗುಡಿಬೆಟ್ಟು**
ಸಂಚಾಲಕರು, ಕ್ರೀಡಾ ಸಮಿತಿ
ಮೊ: 9740923868

**ಸುರೇಂದ್ರ ಶೆಟ್ಟಿ ಹಡಾಳಿ**
ಚೇರ್‌ಪರ್ಸನ್, ಕ್ರೀಡಾ ಸಮಿತಿ
ಮೊ: 9620386172

**ಸೂಚನೆ:**

- ಶಟಲ್ ಬ್ಯಾಡ್ಮಿಂಟನ್ ಗೆ ನೊಂದಾಯಿಸಲು ಕೊನೆಯ ದಿನಾಂಕ: 07.11.2025ನೇ ಶುಕ್ರವಾರ ಸಂಜೆ 6.00 ಕ್ಕೆ
- ಥ್ರೋಬಾಲ್ ಪಂದ್ಯಾವಳಿಗೆ ಹೆಸರು ನೊಂದಾಯಿಸಲು ಕೊನೆಯ ದಿನಾಂಕ : 24.10.2025ನೇ ಶುಕ್ರವಾರ ಸಂಜೆ 6.00 ರ ಒಳಗೆ
- ವಾಲಿಬಾಲ್ ಪಂದ್ಯಾವಳಿಗೆ ಹೆಸರು ನೊಂದಾಯಿಸಲು ಕೊನೆಯ ದಿನಾಂಕ : 21.11.2025ನೇ ಶುಕ್ರವಾರ ಸಂಜೆ 6.00 ರ ಒಳಗೆ

ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಸಮಿತಿಯ ಈ ಕೆಳಕಂಡ ಸದಸ್ಯರನ್ನು ಸಂಪರ್ಕಿಸಬಹುದು.

| | | | | | |
|---|---|---|---|---|---|
| ಸುಚಿನ್ ಶೆಟ್ಟಿ | 8904378046 | ಶರತ್ ಶೆಟ್ಟಿ | 9591295959 | ರವೀಂದ್ರ ಶೆಟ್ಟಿ | 9535655822 |
| ಅಶ್ವಿನಿ ಶೆಟ್ಟಿ | 7795199583 | ನವೀನ್ ಶೆಟ್ಟಿ | 9844226700 | ಅಶೋಕ್ ಶೆಟ್ಟಿ | 9880420959 |

| | | | | | |
|---|---|---|---|---|---|
| ಸಚಿನ್ ಶೆಟ್ಟಿ | 9880982967 | ಮನೋಜ್ ಶೆಟ್ಟಿ | 9902789251 | ಹರೀಶ್ ಶೆಟ್ಟಿ | 9740002710 |
| ನಿತಿನ್ ಶೆಟ್ಟಿ | 9071121952 | ಅಜಿತ್ ಶೆಟ್ಟಿ | 9741077729 | ನಾಗರಾಜ್ ಶೆಟ್ಟಿ | 9663828719 |
| ಗಣೇಶ್ ಶೆಟ್ಟಿ | 9008995720 | ಸುಮಂತ್ ಶೆಟ್ಟಿ | 9591066094 | ಸುಭಾಷ್ ಶೆಟ್ಟಿ | 9972283789 |
| ಸುಜೇಂದ್ರ ಕುಮಾರ್ ಶೆಟ್ಟಿ | 9844444046 | ನಿತಿನ್ ಶೆಟ್ಟಿ | 9964768678 | ಶಶಿರಾಜ್ ಶೆಟ್ಟಿ | 9611981263 |
| ಶರಣು ಕುಮಾರ್ ಶೆಟ್ಟಿ | 9663899206 | ರಘುರಾಮ್ ಶೆಟ್ಟಿ | 8050776115 | | |

## ಅಥ್ಲೆಟಿಕ್ಸ್

ಸ್ಥಳ : ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ, ಸಾಯಿ ಗ್ರೌಂಡ್, ಜ್ಞಾನಭಾರತಿ, ಬೆಂಗಳೂರು
ದಿನಾಂಕ : 12.10.2025, ಭಾನುವಾರ, ಬೆಳಿಗ್ಗೆ 8.30ಕ್ಕೆ
ಪ್ರವೇಶ ಶುಲ್ಕ : ರೂ. 50/– ಪ್ರತಿ ಸ್ಪರ್ಧೆಗೆ

| ವಯೋಮಿತಿ | ವಯೋಮಿತಿ |
|---|---|
| **6 ವರ್ಷದಿಂದ ಕೆಳಗಿನವರಿಗೆ** : 50 ಮೀಟರ್ ಓಟ (ಪ್ರವೇಶ ಶುಲ್ಕ ಇರುವುದಿಲ್ಲ) ಕಪ್ಪೆ ಜಿಗಿತ (Frog Jump) ಚಾಕೋಲೇಟ್ ಸಂಗ್ರಹ | **36 ರಿಂದ 47 ವರ್ಷ (ಮಹಿಳೆಯರಿಗೆ )** : 400 ಮೀಟರ್ ಓಟ<br>ಲೆಮನ್ ಮತ್ತು ಸ್ಪೂನ್ ಸ್ಪರ್ಧೆ<br>ಗುಂಡು ಎಸೆತ (Shot Put) |
| **6 ರಿಂದ 10 ವರ್ಷ** (ಪ್ರವೇಶ ಶುಲ್ಕ ಇರುವುದಿಲ್ಲ) : 100 ಮೀಟರ್ ಓಟ<br>50 ಮೀಟರ್ ಓಟ<br>ಪೊಟ್ಯಾಟೋ ಓಟ | **47 ರಿಂದ 60 ವರ್ಷ (ಪುರುಷರಿಗೆ)** : 400 ಮೀಟರ್ ಓಟ<br>ಗುಂಡು ಎಸೆತ (Shot Put)<br>**ಮಹಿಳೆಯರಿಗೆ** : 400 ಮೀಟರ್ ಓಟ 'ಬಾಲ್‌ತ್ರೋ'<br>ಲೆಮನ್ ಮತ್ತು ಸ್ಪೂನ್ ಸ್ಪರ್ಧೆ |
| **10 ರಿಂದ 14 ವರ್ಷ** (ಪ್ರವೇಶ ಶುಲ್ಕ ಇರುವುದಿಲ್ಲ) : 100 ಮೀಟರ್ ಓಟ<br>50 ಮೀಟರ್ ಓಟ<br>ಉದ್ದ ಜಿಗಿತ | **60 ವರ್ಷ ಮೇಲಿನವರಿಗೆ** : 400 ಮೀಟರ್ ಓಟ / ನಡಿಗೆ (ಪ್ರವೇಶ ಶುಲ್ಕ ಇರುವುದಿಲ್ಲ)<br>**(ಪುರುಷರಿಗೆ)**'ಬಾಲ್‌ತ್ರೋ'<br>**ಮಹಿಳೆಯರಿಗೆ** : 400 ಮೀಟರ್ ಓಟ 'ಬಾಲ್‌ತ್ರೋ' |
| **14 ರಿಂದ 18 ವರ್ಷ** : 100 ಮೀಟರ್ ಓಟ<br>200 ಮೀಟರ್ ಓಟ<br>400ಮೀಟರ್ ಓಟ<br>ಉದ್ದ ಜಿಗಿತ (Long Jump)<br>ಗುಂಡು ಎಸೆತ (Shot Put) | 4 x 100 ಮೀಟರ್ ರಿಲೇ :<br>**ಪುರುಷರು ಮತ್ತು ಮಹಿಳೆರಿಗೆ ಪ್ರತ್ಯೇಕ**<br>18 ವರ್ಷ ವಯೋಮಿತಿ ಒಳಗಿನವರಿಗೆ ಮತ್ತು ಮೇಲ್ಪಟ್ಟವರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ. |
| **18 ರಿಂದ 26 ವರ್ಷ** : 100 ಮೀಟರ್ ಓಟ<br>200 ಮೀಟರ್ ಓಟ<br>400 ಮೀಟರ್ ಓಟ<br>ಗುಂಡು ಎಸೆತ (Shot Put)<br>ಉದ್ದ ಜಿಗಿತ (Long Jump) | ಹಗ್ಗ ಜಗ್ಗಾಟ : ಮಹಿಳೆಯರಿಗೆ ಹಾಗೂ ಪುರುಷರಿಗೆ<br>(Tug of War) 16ವರ್ಷ ವಯೋಮಿತಿ ಒಳಗಿನವರಿಗೆ ಮತ್ತು ಮೇಲ್ಪಟ್ಟವರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ. |
| **26 ರಿಂದ 36 ವರ್ಷ** : 100 ಮೀಟರ್ ಓಟ<br>200 ಮೀಟರ್ ಓಟ<br>400 ಮೀಟರ್ ಓಟ<br>ಗುಂಡು ಎಸೆತ (Shot Put)<br>ಉದ್ದ ಜಿಗಿತ (Long Jump) | **36 ರಿಂದ 47 ವರ್ಷ** (ಪುರುಷರಿಗೆ) : 100 ಮೀಟರ್ ಓಟ<br>200 ಮೀಟರ್ ಓಟ<br>400 ಮೀಟರ್ ಓಟ<br>ಗುಂಡು ಎಸೆತ (Shot Put)<br>Fun Games : ಎಲ್ಲಾ ವಯೋಮಿತಿ (ಸಮಯವಿದ್ದರೆ ಮಾತ್ರ) |

**ವಿ.ಸೂ:– ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯವಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ನೀಡತಕ್ಕದ್ದು. ಸಮಾಜ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.**

**ಸೂಚನೆ :**

1. ಎಲ್ಲಾ ಸ್ಪರ್ಧಿಗಳೂ, ಸ್ಪರ್ಧೆಗೆ ಒಂದು ಗಂಟೆ ಮುಂಚಿತವಾಗಿ ಸ್ಥಳದಲ್ಲಿ ಹಾಜರಿದ್ದು, ಶುಲ್ಕ ನೀಡಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು.
2. ಸ್ಪರ್ಧಾಳುಗಳು ತಮ್ಮ ವಯೋಮಿತಿಗೆ ಅನುಗುಣವಾಗಿ ಭಾಗವಹಿಸಬೇಕು. ಅಗತ್ಯವಿದ್ದಲ್ಲಿ ಪ್ರಮಾಣ ಪತ್ರದ / ದಾಖಲೆಯ ದಿನಾಂಕ ಪ್ರತಿಯನ್ನು ತೋರಿಸತಕ್ಕದ್ದು.
3. ಪ್ರತಿಯೊಂದು ಸ್ಪರ್ಧೆಗೂ ಕನಿಷ್ಠ 4 ಸ್ಪರ್ಧಿಗಳು ಇರಲೇಬೇಕು.
4. ಎಲ್ಲಾ ವಯೋಮಿತಿಯಲ್ಲೂ ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ.
5. 10 ವರ್ಷ ವಯೋಮಿತಿಯ ಕೆಳಗೆ ಹಾಗೂ 60 ವರ್ಷ ಮೇಲ್ಪಟ್ಟವರಿಗೆ ಪ್ರವೇಶ ಶುಲ್ಕ ಇರುವುದಿಲ್ಲ.
6. ಭಾಗವಹಿಸುವ ಎಲ್ಲಾ ಸ್ಪರ್ಧಿಗಳು ಶೂ ಧರಿಸಬೇಕಾಗಿ ವಿನಂತಿ.
7. ಎಲ್ಲಾ ಕ್ರೀಡೆಗಳಿಗೂ ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.
8. ಸ್ಥಳದಲ್ಲಿ ಪ್ರವೇಶವನ್ನು ಸ್ವೀಕರಿಸಲಾಗುವುದು. (Spot Entry accepted)

## ಥ್ರೋಬಾಲ್ : ಮಹಿಳೆಯರಿಗೆ

ಸ್ಥಳ : ದಿ. ಅನಂತ್ ಕುಮಾರ್ ಕ್ರೀಡಾಂಗಣ, ವಿಜಯಾ ಬ್ಯಾಂಕ್ ಲೇಔಟ್, ಬಿಳೇಕಹಳ್ಳಿ, ಬೆಂಗಳೂರು–560076
ದಿನಾಂಕ : 26.10.2025ನೇ ಭಾನುವಾರ, ಬೆಳಿಗ್ಗೆ 09.00ಕ್ಕೆ.
ಪ್ರವೇಶ ಶುಲ್ಕ : ಪ್ರತಿ ತಂಡಕ್ಕೆ ರೂ.1500/–
ಹೆಸರು ನೊಂದಾಯಿಸಲು ಕೊನೆಯ ದಿನಾಂಕ : 24.10.2025ನೇ ಶುಕ್ರವಾರ ಸಂಜೆ 6.00 ರ ಒಳಗೆ ಸ್ಪರ್ಧೆಯ ಡ್ರಾ ನಿಗದಿಯನ್ನು 24.10.2025ನೇ ಶುಕ್ರವಾರದಂದು ತಿಳಿಸಲಾಗುವುದು ಅಥವಾ ಸಂಘದ ಕಛೇರಿಯಲ್ಲಿ ಮಾಹಿತಿ ಪಡೆಯಬಹುದು.

### ಪಂದ್ಯದ ನಿಯಮಗಳು

1. ಯಾವುದೇ ವಯೋಮಿತಿಯ ಮಾನದಂಡ ಇಲ್ಲ.
2. ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯ ಬಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ಒದಗಿಸತಕ್ಕದ್ದು.
3. ತಂಡದಲ್ಲಿ ಒಟ್ಟು 7+3 ಆಟಗಾರರು ಮಾತ್ರ ಇರುತ್ತಾರೆ.

ಅರ್ಜಿ ನಮೂನೆಯನ್ನು ಬಂಟರ ಸಂಘದ ವೆಬ್‌ಸೈಟ್ (www.buntsanghablr.com) ಅಥವಾ ಕಛೇರಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಯಾವುದೇ ರೀತಿಯ ಸಲಹೆ ಸೂಚನೆ ಅಥವಾ ದೂರುಗಳಿದ್ದಲ್ಲಿ ಕ್ರೀಡಾ ಸಮಿತಿಯ ಗಮನಕ್ಕೆ ತರಬೇಕಾಗುವುದು. ಕ್ರೀಡಾ ಸಮಿತಿಯು ಕೈಗೊಳ್ಳುವ ನಿರ್ಧಾರವೇ ಅಂತಿಮ.

## ಶಟಲ್ ಬ್ಯಾಡ್ಮಿಂಟನ್

ಸ್ಥಳ : ಅರ್ರೈಸ್ ಬ್ಯಾಡ್ಮಿಂಟನ್ ಅಕಾಡೆಮಿ, ಅಂಜನಾಪುರ, ಬೆಂಗಳೂರು–560062
ದಿನಾಂಕ : 09.11.2025, ಭಾನುವಾರ, ಬೆಳಿಗ್ಗೆ 8.30ಕ್ಕೆ
ಪ್ರವೇಶ ಶುಲ್ಕ : ರೂ. 200/– ಸಿಂಗಲ್ಸ್ ಗೆ ಮತ್ತು ರೂ. 300/– ಡಬಲ್ಸ್ ಗೆ
ಹೆಸರು ನೊಂದಾಯಿಸಲು ಕೊನೆಯ ದಿನಾಂಕ: 07.11.2025 ನೇ ಶುಕ್ರವಾರ ಸಂಜೆ 6.00ಕ್ಕೆ. ಸ್ಪರ್ಧೆಯ ಡ್ರಾ ನಿಗದಿಯನ್ನು 07.11.2025ನೇ ಶುಕ್ರವಾರದಂದು ತಿಳಿಸಲಾಗುವುದು ಅಥವಾ ಸಂಘದ ಕಛೇರಿಯಲ್ಲಿ ಮಾಹಿತಿ ಪಡೆಯಬಹುದು.

**ವಯೋಮಿತಿ**

| | |
|---|---|
| 15 ವರ್ಷದ ಒಳಗಿನವರಿಗೆ | : ಸಿಂಗಲ್ಸ್ / ಡಬಲ್ಸ್ |
| 15–32 ವರ್ಷ ಒಳಗಿನವರಿಗೆ | : ಸಿಂಗಲ್ಸ್ / ಡಬಲ್ಸ್ |
| 32–50 ವರ್ಷ ಒಳಗಿನವರಿಗೆ | : ಸಿಂಗಲ್ಸ್ / ಡಬಲ್ಸ್ |
| 50 ವರ್ಷ ಮೇಲ್ಪಟ್ಟು | : ಸಿಂಗಲ್ಸ್ / ಡಬಲ್ಸ್ |
| ಮಿಕ್ಸ್‌ಡ್ ಡಬಲ್ಸ್ : ಎಲ್ಲಾ ವಯೋಮಿತಿಯವರಿಗೂ ಮುಕ್ತ (Open for all age groups) | |

**ಪಂದ್ಯದ ನಿಯಮ:**

1. ಎಲ್ಲಾ ವಯೋಮಿತಿಯ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆ.
2. ಹೆಸರು ನೊಂದಾಯಿಸುವಾಗ ವಯಸ್ಸಿನ ದಾಖಲಾತಿಯನ್ನು ಕಡ್ಡಾಯವಾಗಿ ನೀಡತಕ್ಕದ್ದು. **(Any Govt. ID)**
3. ಡಬಲ್ಸ್ ವಿಭಾಗದಲ್ಲಿ ಎರಡೂ ಹೆಸರನ್ನು, ಹೆಸರು ನೊಂದಾಯಿಸುವ ಸಮಯದಲ್ಲೇ ನೀಡತಕ್ಕದ್ದು.
4. ಪ್ರತಿ ವಯೋಮಿತಿಯಲ್ಲೂ ಕನಿಷ್ಠ 4 ಸ್ಪರ್ಧಿ / ತಂಡಗಳ ಪ್ರವೇಶ ಇರಲೇಬೇಕು.
5. ಪ್ರತಿಯೊಬ್ಬ ಸ್ಪರ್ಧಿಗಳು ತಮ್ಮ ವಯೋಮಿತಿಗೆ ಅನುಗುಣವಾಗಿ ಭಾಗವಹಿಸಬೇಕು/ ಅಗತ್ಯವಿದ್ದಲ್ಲಿ ಜನನ ದಿನಾಂಕ ಪ್ರತಿಯನ್ನು ತೋರಿಸತಕ್ಕದ್ದು.
6. ಕಡ್ಡಾಯವಾಗಿ ಸ್ಥಳದಲ್ಲಿ ಯಾವುದೇ ಪ್ರವೇಶವನ್ನು ಸ್ವೀಕರಿಸಲಾಗುವುದಿಲ್ಲ. (No Spot Entry)
7. ಹೆಸರು ನಮೂದಿಸುವಾಗ ಕಡ್ಡಾಯವಾಗಿ ಸದಸ್ಯತ್ವ ಸಂಖ್ಯೆಯನ್ನು ಕೊಡತಕ್ಕದ್ದು.
8. ಡಬಲ್ಸ್ & ಮಿಕ್ಸಡ್ ಡಬಲ್ಸ್ ಸ್ಪರ್ಧೆಗೆ ಸಂಪೂರ್ಣ ತಂಡದ ವಿವರವನ್ನು ನಿಗದಿಪಡಿಸಿದ ದಿನಾಂಕದೊಳಗೆ ಕೊಡಬೇಕು.
9. ಯಾವುದೇ ಆಟಗಾರರು ಹೆಸರು ನೊಂದಾಯಿಸಿ, ನಂತರ ಆಡಲು ಹಿಂಜರಿದರೆ ಸಮಿತಿಯು ಜವಾಬ್ದಾರಿಯಲ್ಲ **(Walk Over)**

## ವಾಲಿಬಾಲ್ : ಪುರುಷರಿಗೆ

ದಿನಾಂಕ : 23.11.2025, ಭಾನುವಾರ, ಬೆಳಿಗ್ಗೆ 9.00ಕ್ಕೆ
ಸ್ಥಳ : ಬಂಟರ ಸಂಘದ ಸಂಕೀರ್ಣ
ವಾಲಿಬಾಲ್‌ಗೆ ಹೆಸರು ನೊಂದಾಯಿಸಲು ಕೊನೆಯ ದಿನಾಂಕ:21.11.2025ನೇ ಶುಕ್ರವಾರ ಸಂಜೆ 6.00 ರ ಒಳಗೆ
ವಾಲಿಬಾಲ್ ಪ್ರವೇಶ ಶುಲ್ಕ : ರೂ. 5000 ಪ್ರತಿ ತಂಡಕ್ಕೆ.
ಸ್ಪರ್ಧೆಯ ಡ್ರಾ ನಿಗದಿಯನ್ನು 21.11.2025ನೇ ಶುಕ್ರವಾರದಂದು ತಿಳಿಸಲಾಗುವುದು ಅಥವಾ ಸಂಘದ ಕಛೇರಿಯಲ್ಲಿ ಮಾಹಿತಿ ಪಡೆಯಬಹುದು

**ವಾಲಿಬಾಲ್ ಪಂದ್ಯದ ನಿಯಮ:**

